# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಜನವರಿ 17, 2025

ಸಂಪುಟ : 51 ಸಂಚಿಕೆ : 245 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಕೇಂದ್ರ ನೌಕರರಿಗಾಗಿ ಎಂಟನೇ ವೇತನ ಆಯೋಗದ ಘೋಷಣೆ

ನವದೆಹಲಿ, ಜ.16- ಕೇಂದ್ರ ಸರ್ಕಾರಿ ನೌಕರರ ವೇತನ ಹಾಗೂ ಭತ್ಯೆಗಳಿಗಾಗಿ ಎಂಟನೇ ವೇತನ ಆಯೋಗ ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವೇತನ ಆಯೋಗ ರಚಿಸಲು ನಿರ್ಧರಿಸಿದ್ದಾರೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. 2016ರಲ್ಲಿ 7ನೇ ವೇತನ ಆಯೋಗ ರಚಿಸಲಾಗಿತ್ತು ಹಾಗೂ ಅದರ ಅವಧಿ 2026ರಲ್ಲಿ ಅಂತ್ಯವಾಗಲಿದೆ. 8ನೇ ವೇತನ ಆಯೋಗವು ಅಧ್ಯಕ್ಷ ಹಾಗೂ ಇಬ್ಬರು ಸದಸ್ಯರನ್ನು ಹೊಂದಿರಲಿದೆ. ಶೀಘ್ರದಲ್ಲೇ ಆಯೋಗ ರಚಿಸಲಾಗುವುದು ಎಂದು ವೈಷ್ಣವ್ ಹೇಳಿದ್ದಾರೆ.

## ಪುಣ್ಯಸ್ಮರಣೆ



36ನೇ ಪುಣ್ಯಸ್ಮರಣೆ

**ದಿ|| ಆರ್. ಶಂಕರ್**

ಫೋರ್‌ಮನ್, ಮುನ್ಸಿಪಾಲಿಟಿ, ದಾವಣಗೆರೆ

ನಿಧನ: 14.01.1989

ನಿಮ್ಮ ಕನಸು ನನಸಾಗಿರುವ ಇಂದಿನ ಸಂದರ್ಭದಲ್ಲಿ ನೀವು ನಮ್ಮೊಂದಿಗೆ ಇರಬೇಕಿತ್ತು.

ನೀವು ನಮ್ಮನ್ನಗಲಿ ಹಲವು ವರ್ಷಗಳಾದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿದೆ.

ನಿಮ್ಮ ಮಾರ್ಗದರ್ಶನ ಹಾಗೂ ಸ್ಫೂರ್ತಿ ಸದಾಕಾಲ ನಮಗೆ ದಾರಿದೀಪ.



10ನೇ ಪುಣ್ಯಸ್ಮರಣೆ

**ದಿ|| ಆರ್. ಗಣೇಶ್**

ಸಹಾಯಕ ಕಾರ್ಯಪಾಲಕ ಅಭಿಯಂತರರು

ನಿಧನ: 17.01.2015

ಶ್ರೀಮತಿ ನಾಗಮಣಿ ಗಣೇಶ್, ಪೂಜಾ ಪ್ರಕಾಶ್ B.E, MBA, ಪ್ರಕಾಶ್ B.E, MS., USA.
ಪುನೀತ್ ಶಂಕರ್ B.E. ಸಹಾಯಕ ಅಭಿಯಂತರರು, PWD
ದಿ. ಹೇಮಂತ್ B.E., ಚಿ. ಕರ್ಣಆದಿತ್ಯ ಹಾಗೂ ಬಂಧು-ಮಿತ್ರರು.

## ಶ್ರೀ ಜೆ.ವಿ. ನಾಗರಾಜ್ ನಿಧನ



ದಾವಣಗೆರೆ # 615/2, 7ನೇ ಮೇನ್, ಪಿ.ಜೆ. ಬಡಾವಣೆ ವಾಸಿ

**ಶ್ರೀ ಜೆ.ವಿ. ನಾಗರಾಜ್**

ಇವರು, ದಿನಾಂಕ : 15.01.2025 ರಂದು ಬುಧವಾರ ಬೆಳಿಗ್ಗೆ 3.30ಕ್ಕೆ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 81 ವರ್ಷ ವಯಸ್ಸಾಗಿತ್ತು, ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ : 17.01.2025ನೇ ಶುಕ್ರವಾರ ಬೆಳಿಗ್ಗೆ 8.00 ಗಂಟೆಯಿಂದ 11ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಅವರ ಸ್ವಗೃಹದಲ್ಲಿ ಇಡಲಾಗುವುದು. ನಂತರ ಶಾಮನೂರು ರುದ್ರಭೂಮಿಯಲ್ಲಿ (ಗ್ಲಾಸ್ ಹೌಸ್ ಪಕ್ಕ) ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :

ಫೋ. : 78924 02144, 94488 73512


manipalhospitals
LIFE'S ON

ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

ಭಾನುವಾರ, 19ನೇ ಜನವರಿ, 2025

ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ

Aaraike Hospitals
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

ಡಾ. ರಾಜೇಂದ್ರ ಪ್ರಸಾದ್ ಬಿ

ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ

ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262

ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580


## ಹಂಚಿನಮನೆ ತಿಪ್ಪಣ್ಣ ನಿಧನ



ದಾವಣಗೆರೆ ನಗರದ ಹಳೇ ಕುಂದುವಾಡ ನಿವಾಸಿ, ಕುರುಬ ಸಮಾಜ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರೂ, ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರೂ ಮತ್ತು ಮಾಜಿ ಸದಸ್ಯರೂ ಆದ

**ಹಂಚಿನಮನೆ ತಿಪ್ಪಣ್ಣ**


ಇವರು, ದಿನಾಂಕ : 16.01.2025 ರ ಗುರುವಾರ ಬೆಳಿಗ್ಗೆ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 76 ವರ್ಷ ವಯಸ್ಸಾಗಿತ್ತು, ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.01.2025ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಹಳೇ ಕುಂದುವಾಡ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಇಂತಿ ದುಃಖತಪ್ತರು :

ಹಂಚಿನಮನೆ ತಿಪ್ಪಣ್ಣ ಇವರ ಧರ್ಮಪತ್ನಿ ಶ್ರೀಮತಿ ನಾಗಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಸಹೋದರರು, ಹಂಚಿನಮನೆ ವಂಶಸ್ಥರು, 44ನೇ ವಾರ್ಡ್, ಹಳೇ ಕುಂದುವಾಡ.

97434 81648, 99804 68630, 98444 68382.

## ಕೊಮಾರನಹಳ್ಳಿ ಗ್ರಾಮದ ಕಲ್ಲಪ್ಪರ ಕರಿಬಸಪ್ಪ ನಿಧನ



ಹರಿಹರ ತಾಲ್ಲೂಕಿನ ಕೊಮಾರನಹಳ್ಳಿ ಗ್ರಾಮದ ಜಮೀನ್ದಾರರಾದ

**ಶ್ರೀ ಕಲ್ಲಪ್ಪರ ಕರಿಬಸಪ್ಪ** ಅವರು

ದಿನಾಂಕ 16-01-2025ರ ಗುರುವಾರ ರಾತ್ರಿ 10-20 ಕ್ಕೆ ಅನಾರೋಗ್ಯದಿಂದಾಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 88 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಐವರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ದಿನಾಂಕ 17-01-2025ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಕೊಮಾರನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :

ಶ್ರೀಮತಿ ರಿಂದಮ್ಮ ಕರಿಬಸಪ್ಪ ಮತ್ತು ಮಕ್ಕಳು ಅಳಿಯಂದಿರು, ಮೊಮ್ಮಕ್ಕಳು, ಕಲ್ಲಪ್ಪರ ವಂಶಸ್ಥರು ಹಾಗೂ ಗ್ರಾಮಸ್ಥರು, ಕೊಮಾರನಹಳ್ಳಿ ಮತ್ತು ಬಂಧು ಮಿತ್ರರು.

ಮೊಬೈಲ್ : 9035961105, 9886128637

ಶ್ರೀ ಸಿದ್ದೇಶ್ವರ ಸ್ಟೋರ್ಸ್, ಮಲೇಬೆನ್ನೂರು

# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜನವರಿ 17, 2025


## ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜೀವನಗಾಥೆ



ಬೆಂಗಳೂರು, ಜ. 16 - ಇಲ್ಲಿನ ಲಾಲ್‌ಬಾಗ್‌ನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಗಣರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ 217ನೇ ಫಲಪುಷ್ಪ ಪ್ರದರ್ಶನದಲ್ಲಿ ಈ ವರ್ಷ ವಿಶ್ವದ ಮೇರು ಕೃತಿಗಳಲ್ಲಿ ಒಂದಾದ ಶ್ರೀಮದ್ ರಾಮಾಯಣ ಮಹಾಕಾವ್ಯ ರಚಿಸಿದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯವರ ಜೀವನಗಾಥೆಯನ್ನು ವಿಶ್ವದ ವಿವಿಧ ಬಗೆಯ 32 ಲಕ್ಷ ಹೂಗಳಿಂದ ಅಲಂಕರಿಸಿದ ಫಲಪುಷ್ಪ ಪ್ರದರ್ಶನವನ್ನು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಚಿತ್ರದುರ್ಗದ ಮಡಿವಾಳ ಮಾಚಿದೇವ ಗುರುಪೀಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತೋಟಗಾರಿಕೆ ಇಲಾಖೆ ಸಚಿವ ಎಸ್ ಎಸ್ ಮಲ್ಲಿಕಾರ್ಜುನ್ ಅವರು ಶ್ರೀ ಮಹರ್ಷಿ ವಾಲ್ಮೀಕಿಯವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿದರು.

ವಸತಿ ಸಚಿವ ಜಮೀರ್ ಅಹಮದ್ ಖಾನ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಉದಯ ಗರುಡಾಚಾರ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಸೇರಿದಂತೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಈ ವೇಳೆ ಹಾಜರಿದ್ದರು.

ಈ ಫಲಪುಷ್ಪ ಪ್ರದರ್ಶನ ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರನ್ನು (2ನೇ ಪುಟಕ್ಕೆ)

## ಜಲಸಿರಿ ಬಿಲ್ ಅವೈಜ್ಞಾನಿಕ

### ಪಾಲಿಕೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯರ ಆಕ್ರೋಶ



ದಾವಣಗೆರೆ, ಜ. 16- ಕೆಲ ಕಾಲ ಮುಂದೂಡಲ್ಪಟ್ಟಿದ್ದ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ, ಜಲಸಿರಿ ಯೋಜನೆಯಡಿ ಸಮರ್ಪಕ ಕುಡಿಯುವ ನೀರು ಸರಬರಾಜಾಗದಿದ್ದರೂ, ಅವೈಜ್ಞಾನಿಕವಾಗಿ ನೀರಿನ ಶುಲ್ಕ ವಿಧಿಸುತ್ತಿದ್ದು, ಇದರಿಂದ ಗ್ರಾಹಕರಿಗೆ ಬರ ಸಿಡಿಲು ಬಡಿದಂತಾಗಿದೆ ಎಂದು ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್, ಮಾಜಿ ಮೇಯರ್ ಎಸ್. ಟಿ. ವೀರೇಶ್ ಜಲಸಿರಿ ಬಿಲ್ ಪ್ರದರ್ಶಿಸುವ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಕೆಲವು ಗಂಟೆಗಳ ಕಾಲ ಮುಂದೂಡಲ್ಪಟ್ಟು ಮತ್ತೆ ನಡೆದ ಸಾಮಾನ್ಯ ಸಭೆ ಮೇಯರ್ ಕೆ. ಚಮನ್‌ಸಾಬ್ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರು ಜಲಸಿರಿ ಯೋಜನೆಯಡಿ ಸಮರ್ಪಕವಾಗಿ ನೀರು ಸರಬರಾಜಾಗದಿರುವ ಬಗ್ಗೆ ಮತ್ತು ಅಧಿಕ ಶುಲ್ಕ ವಿಧಿಸುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಲಸಿರಿ ಯೋಜನೆಯ ಅಧಿಕಾರಿಗಳು ಮನ ಬಂದಂತೆ ಜಲಸಿರಿ ಕಾಮಗಾರಿ ಮಾಡುತ್ತಿದ್ದು, ಇಚ್ಛೆ ಬಂದಂತೆ ಬಿಲ್ ನೀಡುವ ಮೂಲಕ ಜನರ ಬದುಕಿನೊಂದಿಗೆ ಆಟವಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮೇಯರ್ ಚಮನ್‌ಸಾಬ್ ಮಾತನಾಡಿ, ಜಲಸಿರಿ ಕಾಮಗಾರಿ, ನೀರು ಸರಬರಾಜು ವ್ಯವಸ್ಥೆ, ನೀರಿನ ಬಿಲ್ ನೀಡಿಕೆ ಕೇವಲ ಒಂದೇ ವಾರ್ಡಿನ ಸಮಸ್ಯೆಯಾಗಿಲ್ಲ. ಅದರ ಬಿಸಿ ಎಲ್ಲರಿಗೂ ತಟ್ಟುತ್ತಿದೆ. ಜಲಸಿರಿ ಯೋಜನೆಯ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಇಲ್ಲವಾದರೆ ಎಲ್ಲಾ ಸದಸ್ಯರ ಪ್ರತಿರೋಧ ಹಾಗೂ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಎಲ್ಲಾ 45 ವಾರ್ಡ್‌ಗಳಿಗೂ ಸಮರ್ಪಕವಾಗಿ ಅನುದಾನ ಹಂಚಿಕೆಯಾಗಬೇಕು. ಸರಿಯಾದ ರೀತಿಯಲ್ಲಿ ಅನುದಾನ ಸಿಗುತ್ತಿಲ್ಲ. ಪ್ರತಿ ವಾರ್ಡ್‌ಗೆ ಕನಿಷ್ಠ 50 ಲಕ್ಷ ವನ್ನಾದರೂ ನೀಡಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮೇಯರ್ ಚಮನ್‌ಸಾಬ್ ಅವರು, ಎಲ್ಲಿ ಅಗತ್ಯವಿದೆಯೋ ಅಲ್ಲಿ ಅನುದಾನ ನೀಡಿದ್ದೇವೆ. ಯಾವುದೇ ತಾರತಮ್ಯ ಮಾಡಿಲ್ಲ ಎಂದು ಸ್ಪಷ್ಟನೆ ನೀಡಿದರು.

ಮಹಾನಗರ ಪಾಲಿಕೆ ಅರವತ್ತು ಕೋಟಿ ರೂ. ಸಾಲ ಹೊಂದಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಅನುದಾನ ಹಂಚಿಕೆ ಮಾಡೋಣ. ಒಂದಿಷ್ಟು ಏರುಪೇರಾದರೂ ಪಾಲಿಕೆಗೆ ಬಾಗಿಲು ಹಾಕುವ ಪರಿಸ್ಥಿತಿ ಬರುತ್ತದೆ ಎಂದು ಮೇಯರ್ ಹೇಳಿದರು.

ಉಪ ಮೇಯರ್ ಸೋಗಿ ಶಾಂತ ಕುಮಾರ್, ಸ್ಥಾಯಿ ಸಮಿತಿ (2ನೇ ಪುಟಕ್ಕೆ)

## ಹಲವು ತಿಕ್ಕಾಟಗಳ ನಡುವೆ ಮುಂದೂಡಿ, ನಡೆದ ಸಭೆ

ದಾವಣಗೆರೆ, ಜ. 16- ಹಲವು ತಿಕ್ಕಾಟ, ಗೊಂದಲದ ನಡುವೆಯೂ ಮುಂದೂಡಿ ಮತ್ತೆ ಸಭೆ ನಡೆದ ಘಟನೆ ಇಂದು ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆಯಿತು.

ಮೇಯರ್ ಕೆ. ಚಮನ್ ಸಾಬ್ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಾಮಾನ್ಯ ಸಭೆ ಆರಂಭದಲ್ಲೇ ತಿಕ್ಕಾಟಗಳಿಗೆ ಎಡೆ ಮಾಡಿಕೊಟ್ಟಿತ್ತು. ಕಾಂಗ್ರೆಸ್ ಸದಸ್ಯರ ಹೈಡ್ರಾಮಾ ಕೂಡ ನಡೆಯಿತು.

ಬೆಳಿಗ್ಗೆ 11 ಗಂಟೆಗೆ ಆರಂಭವಾಗಬೇಕಿದ್ದ ಸಾಮಾನ್ಯ ಸಭೆ ಒಂದು ಗಂಟೆಯಾದರೂ ಆರಂಭವಾಗಲೇ ಇಲ್ಲ. ಮೇಯರ್ ಕೆ. ಚಮನ್ ಸಾಬ್ ಹಲವು ಬಾರಿ ರೂಲಿಂಗ್ ನೀಡಿದರೂ ಕಾಂಗ್ರೆಸ್ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್ ಅವರ ಕೋರಿಕೆಯಂತೆ ಸಮಯ ನೀಡಿದರೂ, ಸ್ಥಾಯಿ ಸಮಿತಿ ಅಧ್ಯಕ್ಷರುಗಳು ಹಾಗೂ ಕಾಂಗ್ರೆಸ್‌ನ ಕೆಲವು ಸದಸ್ಯರು ಮೇಯರ್ ವಿರುದ್ಧ ಕುಪಿತಗೊಂಡು ಸಭೆಗೆ ಹಾಜರಾಗದೇ ಪಾಲಿಕೆ ಆವರಣದಲ್ಲಿಯೇ ಓಡಾಡುತ್ತಿದ್ದರು.

ಕಾಂಗ್ರೆಸ್ ಸದಸ್ಯ ಎ. ನಾಗರಾಜ್, ಅಬ್ದುಲ್ ಲತೀಫ್, ಮೇಯರ್ ಚಮನ್‌ಸಾಬ್ ಅವರೊಂದಿಗೆ ಮಾತುಕತೆ ನಡೆಸಿದ ವೇಳೆ ಕುಪಿತರಾದ ಮೇಯರ್, ಇದೇನು ಅಂಗಡಿನಾ ವ್ಯಾಪಾರ ಮಾಡಲು? ಅದೆಲ್ಲ ಅಗೋಲ್ಲ. ಕೆಲವು ಸದಸ್ಯರು ಸಭೆ ಬರದೇ ಇರುವ ಬಗ್ಗೆ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ್ ಅವರ ಗಮನಕ್ಕೆ ತರುತ್ತೇನೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷೆ ಆಶಾ ಉಮೇಶ್ ಅವರ ಪತಿ ಉಮೇಶ್ ಸಹ ಮೇಯರ್ ಅವರಿಗೆ (2ನೇ ಪುಟಕ್ಕೆ)

## ತ್ಯಾಜ್ಯ ವಿಲೇವಾರಿ ಘಟಕ ನಿರ್ಬಂಧಿತ ಪ್ರದೇಶ: ರೇಣುಕಾ

ದಾವಣಗೆರೆ, ಜ. 16- ಆವರಗೊಳ್ಳ ಗ್ರಾಮದ ಹತ್ತಿರ ಇರುವ ಮಹಾನಗರಪಾಲಿಕೆ ಒಡೆತನದಲ್ಲಿ ರುವ 33 ಎಕರೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಘಟಕದ ಸರ್ವೇ ನಂ 117/2, 119, 123, 129, 129/1, 129/2, 129/4, 130/1 ಪ್ರದೇಶಗಳು ಸಂಪೂರ್ಣ ವಾಗಿ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ.

ಯಾವುದೇ ಅನಧಿಕೃತ ವಾಹನ ಗಳಾಗಲೀ, ವ್ಯಕ್ತಿ ಗಳಾಗಲೀ, ಜಾನು ವಾರುಗಳಾಗಲೀ ಪೂರ್ವಾ ನುಮತಿ ಇಲ್ಲದೇ ಪ್ರವೇಶವಿರುವುದಿಲ್ಲ.

ಒಂದು ವೇಳೆ ಯಾವುದೇ ವ್ಯಕ್ತಿ, ವಾಹನ, ಜಾನುವಾರುಗಳು ಮಹಾ ನಗರ ಪಾಲಿಕೆ ಯ ಅನುಮತಿ ಇಲ್ಲದೇ ಅನಧಿಕೃತವಾಗಿ ಪ್ರವೇಶಿಸು ವುದು ಹಾಗೂ ನುಸುಳಿ ಯಾವುದೇ ರೀತಿಯ ಅನಾಹುತ ಕ್ಕೊಳಗಾದಲ್ಲಿ ಪಾಲಿಕೆ ಜವಾಬ್ದಾರಿಯಾಗಿರು ವುದಿಲ್ಲ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

## ಶ್ರೀಹರಿಕೋಟಾದಲ್ಲಿ ಮೂರನೇ ಉಡಾವಣೆ ತಾಣಕ್ಕೆ ಕೇಂದ್ರ ಸಂಪುಟದ ಅನುಮೋದನೆ

ನವದೆಹಲಿ, ಜ. 16- ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ 3ನೇ ಉಡಾವಣಾ ತಾಣ ನಿರ್ಮಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. 3985 ಕೋಟಿ ರೂ ವೆಚ್ಚದಲ್ಲಿ ಈ ಉಡಾವಣಾ ತಾಣ ನಿರ್ಮಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಆಂಧ್ರಪ್ರದೇಶದ ಶ್ರೀಹರಿಕೋಟದಲ್ಲಿ ಮುಂದಿನ ಪೀಳಿಗೆಯ ಇಸ್ರೋ ರಾಕೆಟ್ ಉಡಾ ವಣೆಗೆ ಅನುಕೂಲ ಮಾಡಿಕೊಡಲು ತಾಣ ನಿರ್ಮಿಸಲಾಗುತ್ತಿದೆ. ಅಲ್ಲದೆ ಶ್ರೀಹರಿಕೋಟಾದಲ್ಲಿರುವ ಎರಡನೇ ಉಡಾವಣಾ ತಾಣಕ್ಕೂ ಇದು ನೆರವಾಗಲಿದೆ.

ಇಸ್ರೋದ ಮಾನವ ಸಹಿತ ಬಾಹ್ಯಾಕಾಶ ಯಾನಕ್ಕೆ ಮೂರನೇ ಉಡಾ ವಣೆ ತಾಣ ನೆರವಾಗಲಿದೆ ಎಂದು ಸರ್ಕಾರಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ಜಾಗತಿಕ ಮಟ್ಟದ ಹಾಗೂ ಎಲ್‌ವಿಎಂ 3 ಹಾಗೂ ಎನ್‌ಜಿಎಲ್‌ವಿ ರಾಕೆಟ್ ಉಡಾವಣೆಗಳಿಗೆ ಅನುಕೂಲವಾಗುವಂತೆ ಈ ತಾಣವನ್ನು 4 ವರ್ಷಗಳಲ್ಲಿ ರೂಪಿಸಲಾಗುವುದು.

## ಈ ವರ್ಷವೂ ಕಾಗದದ ಮೂಲಕ ನೀಟ್ ಪರೀಕ್ಷೆ ನಡೆಸಲು ನಿರ್ಧಾರ

ನವದೆಹಲಿ, ಜ.16- ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ -ಯುಜಿ ಪರೀಕ್ಷೆಯನ್ನು ಸದ್ಯಕ್ಕೆ ಆನ್‌ಲೈನ್ ಮೂಲಕ ನಡೆಸದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರಿಂದಾಗಿ ಕಾಗದದ ಮೂಲಕ ಪ್ರವೇಶ ಪರೀಕ್ಷೆ ನಡೆಸುವುದನ್ನು ಮುಂದುವರೆಸಲಾಗುವುದು.


ಪರೀಕ್ಷೆಯನ್ನು ಕಾಗದದ ಮೂಲಕ ನಡೆಸಬೇಕೇ ಅಥವಾ ಆನ್‌ಲೈನ್ ಮೂಲಕ ನಡೆಸಬೇಕೇ ಎಂದು ಶಿಕ್ಷಣ ಹಾಗೂ ಆರೋಗ್ಯ ಸಚಿವಾಲಯಗಳು ಚರ್ಚೆ ನಡೆಸಿದ್ದವು.

ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ ಪರೀಕ್ಷೆಗೆ ಕಳೆದ ವರ್ಷ 24 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. ಇದು ದೇಶದಲ್ಲೇ ಅತಿ ದೊಡ್ಡ ಪ್ರವೇಶ ಪರೀಕ್ಷೆಯಾಗಿದೆ.

## ಉಪಗ್ರಹಗಳ ಜೋಡಣೆ: ಇಸ್ರೋಗೆ ಯಶಸ್ಸು

ಬೆಂಗಳೂರು, ಜ.16- ಸ್ಪೇಸ್ ಡಾಕಿಂಗ್ ಎಕ್ಸ್‌ಪಿರಿಮೆಂಟ್ (ಸ್ಪೇಡೆಕ್ಸ್) ಯೋಜನೆಯ ಅಂಗವಾಗಿ ಉಪಗ್ರಹಗಳನ್ನು ಬಾಹ್ಯಾಕಾಶದಲ್ಲಿ ಜೋಡಣೆ ಮಾಡುವಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಯಶಸ್ಸು ಗಳಿಸಿದೆ.

2 ಉಪಗ್ರಹಗಳನ್ನು ಒಂದೇ ವಸ್ತುವಿನ ರೀತಿಯಲ್ಲಿ ನಿಯಂತ್ರಿಸುವ ಪೋಸ್ಟ್ ಡಾಕಿಂಗ್ ನಲ್ಲೂ ಯಶಸ್ಸು ಗಳಿಸಿರುವುದಾಗಿ ಇಸ್ರೋ ಹೇಳಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಇಸ್ರೋ, ಸ್ಪೇಡೆಕ್ಸ್ ಯೋಜನೆಯಲ್ಲಿ ಐತಿಹಾಸಿಕ ಯಶಸ್ಸು ದೊರೆತಿದೆ. ಎರಡು ಉಪಗ್ರಹಗಳನ್ನು ಒಂದೇ ವಸ್ತುವಿನ ರೀತಿಯಲ್ಲಿ ನಿಯಂತ್ರಿಸುವ ಪೋಸ್ಟ್ ಡಾಕಿಂಗ್ ಯಶಸ್ಸು ಕಂಡಿದೆ.



ಮುಂದಿನ ದಿನಗಳಲ್ಲಿ ಅನ್‌ಡಾಕಿಂಗ್ ಹಾಗೂ ವಿದ್ಯುತ್ ಪೂರೈಕೆಯನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದೆ.

ಅಮೆರಿಕಾ, ರಷ್ಯಾ ಹಾಗೂ ಚೀನಾಗಳ ನಂತರ ಭಾರತ ಉಪಗ್ರಹಗಳನ್ನು ಡಾಕಿಂಗ್ ಮಾಡುವುದರಲ್ಲಿ ಯಶಸ್ಸು ಕಂಡಿದೆ. ಈ ಸಾಧನೆಗಾಗಿ ಇಸ್ರೋ ವಿಜ್ಞಾನಿಗಳು ಹಾಗೂ ಬಾಹ್ಯಾಕಾಶ ಬಳಗಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಇದಕ್ಕೂ ಮುಂಚೆ ಜನವರಿ 12ರಂದು ಇಸ್ರೋ ಎರಡು ಉಪಗ್ರಹಗಳನ್ನು 3 ಮೀಟರ್‌ಗಳಷ್ಟು ಹತ್ತಿರಕ್ಕೆ ತಂದು ಹಾಗೂ ನಂತರ ಸುರಕ್ಷಿತ ದೂರಕ್ಕೆ ಕಳಿಸಿತ್ತು. ಉಪಗ್ರಹಗಳ ಡಾಕಿಂಗ್ ಮುಂಚೆ ಈ ಪ್ರಾಯೋಗಿಕ ಕ್ರಮ ತೆಗೆದುಕೊಳ್ಳಲಾಗಿತ್ತು.

ಕಳೆದ ಡಿ. 30ರಂದು ಸ್ಪೇಡೆಕ್ಸ್ ಉದ್ದೇಶಕ್ಕಾಗಿ ಇಸ್ರೋ ಉಡಾವಣೆಯೊಂದನ್ನು ಕೈಗೊಂಡಿತ್ತು. ಚೇಸರ್ (2ನೇ ಪುಟಕ್ಕೆ)

## ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಅಧ್ಯಕ್ಷರಾಗಿ ಆರ್.ಜಿ.ಎಸ್. ಪುನರಾಯ್ಕೆ





### ಉಪಾಧ್ಯಕ್ಷರಾಗಿ ಎ.ಎಸ್. ಸತ್ಯನಾರಾಯಣ ಸ್ವಾಮಿ

ದಾವಣಗೆರೆ, ಜ. 16 - ನಗರದ ಪ್ರತಿಷ್ಠಿತ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕಿನ ಹಾಲಿ ಅಧ್ಯಕ್ಷರಾದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಆರ್.ಜಿ. ಶ್ರೀನಿವಾಸಮೂರ್ತಿ ಅವರು ಮತ್ತೊಂದು ಅವಧಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಸಹ ಕಾರ್ಯದರ್ಶಿಯೂ ಆಗಿರುವ ವಾಣಿಜ್ಯೋದ್ಯಮಿ ಎ.ಎಸ್. ಸತ್ಯನಾರಾಯಣ ಸ್ವಾಮಿ ಅವರೂ ಕೂಡಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ಬ್ಯಾಂಕಿನ ಆಡಳಿತ ಮಂಡಳಿಯ ನೂತನ ನಿರ್ದೇಶಕರ ಪ್ರಥಮ ಸಭೆಯಲ್ಲಿ ಈ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿ ಸತೀಶ್ ನಾಯ್ಕ್ ಘೋಷಿಸಿದ್ದಾರೆ.

ಚುನಾವಣೆ ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ನೂತನ ಅಧ್ಯಕ್ಷ ಶ್ರೀನಿವಾಸ ಮೂರ್ತಿ, ಮುಂದಿನ ದಿನಗಳಲ್ಲಿ ಶೀಘ್ರದಲ್ಲಿಯೇ ಬ್ಯಾಂಕು ಯರಗುಂಟೆ ಗ್ರಾಮದ ಕೈಗಾರಿಕಾ ಪ್ರದೇಶದಲ್ಲಿ ಹೊಂದಿರುವ 8000 ಚ.ಅಡಿ ನಿವೇಶನದಲ್ಲಿ ಸ್ವಂತ ಕಟ್ಟಡ ಹಾಗೂ 5ನೇ ಶಾಖೆಯನ್ನು ಸುಂದರ ಒಳಾಂಗಣದೊಂದಿಗೆ, ಡಿಜಿಟಲ್ ಬ್ಯಾಂಕಿಂಗ್ ಸೇವೆಗಳಾದ ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಯು.ಪಿ.ಐ. ಮತ್ತು ಮುಂತಾದ ಸೇವೆಗಳನ್ನು ಸದಸ್ಯ ಬಾಂಧವರಿಗೆ ಮತ್ತು ಜನತೆಗೆ ಸಮರ್ಪಿಸಲಾಗುವುದು ಎಂದು ತಿಳಿಸಿದರು.

2024-25ನೇ ಸಾಲಿನ ವಾರ್ಷಿಕ ಅಂತ್ಯಕ್ಕೆ ರೂ.5 ಕೋಟಿ 10 ಲಕ್ಷಗಳ ನಿವ್ವಳ ಲಾಭವನ್ನು 2025-26ನೇ ಸಾಲಿಗೆ ಸುಮಾರು ರೂ. 6 ಕೋಟಿಗಳ ನಿವ್ವಳ ಲಾಭವನ್ನು ಗಳಿಸಲು ಉದ್ದೇಶಿಸಲಾಗಿದೆ ಎಂದು ಅವರು ವಿವರಿಸಿದರು.

ಬ್ಯಾಂಕಿನ ನಿರ್ದೇಶಕರುಗಳಾದ ಆರ್. ಎಲ್. ಪ್ರಭಾಕರ್, ಕಾಸಲ್ ಎಸ್. ಸತೀಶ್, ಕೆ. ಎನ್. ಅನಂತರಾಮ ಶೆಟ್ಟಿ, ಬಿ.ಪಿ. ನಾಗಭೂಷಣ್, ಕೆ.ವಿ. ಮಂಜುನಾಥ್, ಎನ್. ಕಾಶೀನಾಥ್, ಜೆ. ರವೀಂದ್ರ (2ನೇ ಪುಟಕ್ಕೆ)

## ಅಬಕಾರಿ ನೌಕರರ ವರ್ಗಾವಣೆಗೆ ಕೌನ್ಸಿಲಿಂಗ್

### ಭ್ರಷ್ಟಾಚಾರಕ್ಕೆ ಕಡಿವಾಣ

ಬೆಂಗಳೂರು, ಜ. 16- ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇನ್ನು ಮುಂದೆ ಅಧಿಕಾರಿ ಮತ್ತು ನೌಕರರ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಮಾಡಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಈ ಸಂಬಂಧ ನಿಯಮಾವಳಿಗಳಿಗೆ ತಿದ್ದುಪಡಿ ತಂದು ವರ್ಗಾವಣೆ ಸ್ವರೂಪ ಸಿದ್ಧಪಡಿಸುವಂತೆ ಇಲಾಖೆಗೆ ಆದೇಶಿಸಿದೆ.

ಮಂಡ್ಯ ಜಿಲ್ಲೆಯ ವಿ.ಸಿ.ಫಾರಂನಲ್ಲಿ ನೂತನ ವಾಗಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪಿಸಲು ಸಂಪುಟ ಹಸಿರು ನಿಶಾನೆ ತೋರಿದೆ. ನಾಗರಿಕರಿಗೆ ಕಣ್ಣಿನ ಉಚಿತ ತಪಾಸಣೆ ಹಾಗೂ ಕನ್ನಡಕ ವಿತರಿಸುವ ಆಶಾಕಿರಣ ಯೋಜನೆಯನ್ನು 13.30 ಕೋಟಿ ರೂ. ವೆಚ್ಚದಲ್ಲಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಸಮ್ಮತಿಸ ಲಾಗಿದೆ. ಸುವರ್ಣ ಆರೋಗ್ಯ ಟ್ರಸ್ಟ್‌ಗೆ ಹೊರಗುತ್ತಿಗೆ ಆಧಾರದ ಮೇಲೆ ಆರೋಗ್ಯ ಮಿತ್ರರು ಮತ್ತು ಸಿಬ್ಬಂದಿಗಳನ್ನು 53.18 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಎರಡು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲು, ಹೊಸ ಟೆಂಡರ್ ಪ್ರಕ್ರಿಯೆಗೆ (2ನೇ ಪುಟಕ್ಕೆ)

## ನಟ ಸೈಫ್ ಅಲಿ ಖಾನ್‌ಗೆ ಚೂರಿ ಇರಿತ



ಮುಂಬೈ, ಜ.16 - ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರ ಅಪಾರ್ಟ್ ಮೆಂಟ್‌ಗೆ ನುಸುಳಿದ ವ್ಯಕ್ತಿಯೋರ್ವ ಚೂರಿಯಿಂದ ಇರಿದ ಘಟನೆ ನಡೆದಿದೆ.

ಸದ್ಗುರು ಶರಣ್ ಕಟ್ಟಡದಲ್ಲಿರುವ 12ನೇ ಮಹಡಿಯ ಖಾನ್ ಅಪಾರ್ಟ್‌ಮೆಂಟ್‌ಗೆ ವ್ಯಕ್ತಿಯೋರ್ವ ರಾತ್ರಿ ನುಸುಳಿ ಚೂರಿಯಿಂದ ಇರಿದಿದ್ದಾನೆ. ಖಾನ್‌ಗೆ ಆರು ಗಾಯಗಳಾಗಿದ್ದು, ಕೈ ಹಾಗೂ ಕುತ್ತಿಗೆಗೆ ಆದ ಗಾಯಗಳು ತೀವ್ರ ಸ್ವರೂಪದ್ದಾಗಿವೆ. ರಾತ್ರಿ 2:30ರ ಸಮಯದಲ್ಲಿ ಈ ಘಟನೆ ನಡೆದಿದೆ. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗಿದೆ. ಮನೆಯೊಳಗೆ ಬಲವಂತವಾಗಿ ನುಸುಳಿದ ಯಾವುದೇ ಸುಳಿವು ಕಂಡುಬಂದಿಲ್ಲ. ರಾತ್ರಿ ವೇಳೆಯೇ ಕಳ್ಳ ಮನೆಯೊಳಗೆ ಬಂದಿರಬಹುದು ಎಂದು ಶಂಕಿಸಲಾಗುತ್ತಿದೆ. ದಾಳಿ (2ನೇ ಪುಟಕ್ಕೆ)

## ಗ್ಯಾರಂಟಿ ಯೋಜನೆಗಳಿಂದ ಶೇ.98ರಷ್ಟು ಯಶಸ್ಸು



### ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್

ದಾವಣಗೆರೆ, ಜ. 16- ಗ್ಯಾರಂಟಿ ಯೋಜನೆಗಳಿಂದ ಜಿಲ್ಲೆಯಲ್ಲಿನ ಬಹುತೇಕ ಕುಟುಂಬಗಳು ಆರ್ಥಿಕವಾಗಿ ಸಬಲ ರಾಗಲು ಕಾರಣವಾಗಿದ್ದು ಈ ಯೋಜನೆಗಳ ಅನುಷ್ಠಾನದಲ್ಲಿ ಶೇ 98ಕ್ಕಿಂತ ಹೆಚ್ಚು ಪ್ರಗತಿಯನ್ನು ಸಾಧಿಸಲಾಗಿದೆ ಎಂದು ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ತಿಳಿಸಿದರು.

ಅವರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಕ್ತಿ ಯೋಜನೆಯಡಿ ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಡಿಸೆಂಬರ್ ಅಂತ್ಯದವರೆಗೆ 67,75,1001 ಟ್ರಿಪ್‌ಗಳಲ್ಲಿ ಮಹಿಳೆಯರು ಪ್ರಯಾಣಿಸಿದ್ದು ಇದರ ವೆಚ್ಚವಾಗಿ ರೂ.189,13,62,548 ರೂ.ಗಳನ್ನು ಸರ್ಕಾರದಿಂದ ಭರಿಸಲಾಗಿದೆ.

ಗೃಹಜ್ಯೋತಿ ಯೋಜನೆಯಲ್ಲಿ ದಾವಣಗೆರೆ ಮತ್ತು ಹರಿಹರ ವಿಭಾಗದಿಂದ ಒಟ್ಟು 556624 ವಿದ್ಯುತ್ ಸಂಪರ್ಕ ಪಡೆದ ಆರ್.ಆರ್.ಸಂಖ್ಯೆಗಳಿದ್ದು ಇದರಲ್ಲಿ 502344 ಆರ್.ಆರ್.ಸಂಖ್ಯೆಯ ಫಲಾನುಭವಿಗಳು ಗೃಹಜ್ಯೋತಿಯಡಿ ನೊಂದಣಿಯಾಗಿದ್ದು ಇದರ ವೆಚ್ಚವಾಗಿ ಡಿಸೆಂಬರ್ ತಿಂಗಳಲ್ಲಿ ರೂ.21 ಕೋಟಿ ವೆಚ್ಚವನ್ನು ಹೊಂದಾಣಿಕೆ ಮಾಡಲಾಗಿದೆ.

ಗೃಹಲಕ್ಷ್ಮಿ ಯೋಜನೆಯಡಿ ಅಕ್ಟೋಬರ್ ಅಂತ್ಯದ ವರೆಗೆ 360849 ಮಹಿಳೆಯರಿಗೆ ಆರಂಭದಿಂದ ಇಲ್ಲಿಯ ವರೆಗೆ 501.72 ಕೋಟಿ ರೂ. ವರ್ಗಾವಣೆ ಮಾಡಲಾಗಿದೆ.

ಅನ್ನಭಾಗ್ಯ ಯೋಜನೆಯಡಿ ಸೆಪ್ಟೆಂಬರ್ ಅಂತ್ಯದವರೆಗೆ 342968 ಕಾರ್ಡ್‌ದಾರರಲ್ಲಿನ 1229893 ಸದಸ್ಯರಿಗೆ ಯೋಜನೆ ಆರಂಭವಾದಾಗಿನಿಂದ ರೂ.286.66 ಕೋಟಿಯನ್ನು ಡಿಬಿಟಿ ಮೂಲಕ ಅವರ ಖಾತೆಗೆ ವರ್ಗಾಯಿಸಲಾಗಿದೆ.

ಯುವನಿಧಿ ಯೋಜನೆಯಡಿ 5802 ಅಭ್ಯರ್ಥಿಗಳಿಗೆ 8,46,8700 ರೂ.ಗಳನ್ನು ಶಿಷ್ಯವೇತನವಾಗಿ ಅವರ ಖಾತೆಗೆ ಜಮಾ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

2024 ನೇ ಸಾಲಿನಲ್ಲಿ ಉತ್ತೀರ್ಣರಾದ ಪದವೀಧರರಿಗೆ ಹಾಗೂ ಡಿಪ್ಲೊಮಾ ಪಾಸಾದವರು ಯುವನಿಧಿಯಡಿ ನೊಂದಣಿ ಮಾಡಲು ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ್, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಅನೀಶ್ ಪಾಷ, ನಂಜಾನಾಯ್ಕ್, ಅನಿತಾ ಬಾಯಿ ಮಾಲತೇಶ, ರೇವಣಸಿದ್ದಪ್ಪ , (2ನೇ ಪುಟಕ್ಕೆ)

## ಎರಡಕ್ಕಿಂತ ಹೆಚ್ಚು ಮಕ್ಕಳಿದ್ದರಷ್ಟೇ ಸ್ಪರ್ಧೆ

### ಹೆಚ್ಚು ಮಕ್ಕಳ ಹೊಂದಲು ಪ್ರೋತ್ಸಾಹಿಸಲು ಹೊಸ ನೀತಿ

### ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಹೇಳಿಕೆ

ತಿರುಪತಿ, ಜ.16- ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿದವರು ಮಾತ್ರ ಪಂಚಾಯ್ತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ಪರ್ಧಿ ಸಬಹುದು ಎಂಬ ನಿಯಮ ರೂಪಿಸುವುದಾಗಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಿಳಿಸಿದ್ದಾರೆ.

ಜನರು ಹೆಚ್ಚು ಮಕ್ಕಳು ಹೊಂದಲು ಪ್ರೋತ್ಸಾಹ ನೀಡುವ ನೀತಿ ರೂಪಿಸಲಾಗುವುದು ಎಂದು ನಾಯ್ಡು ಹೇಳಿದ್ದಾರೆ.

ಒಂದು ಕಾಲದಲ್ಲಿ ಹೆಚ್ಚು ಮಕ್ಕಳಿದ್ದವರು ಪಂಚಾಯಿತಿಗಳಿಗೆ, ಇಲ್ಲವೇ ಸ್ಥಳೀಯ ಸಂಸ್ಥೆಗಳಿಗೆ ಸ್ಪರ್ಧಿಸಲು ಅವಕಾಶ ನೀಡುತ್ತಿರಲಿಲ್ಲ. ಈಗ ಕಡಿಮೆ ಮಕ್ಕಳನ್ನು ಹೊಂದಿರುವವರು ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗದು. ಪಂಚಾಯ್ತಿ, ನಗರ ಸ್ಥಳೀಯ ಸಂಸ್ಥೆ ಸದಸ್ಯರಾಗಲು ಇಲ್ಲವೇ ಮೇಯರ್ ಹಾಗೂ ಪಂಚಾಯ್ತಿ ಅಧ್ಯಕ್ಷರಾಗಲು ಬಯಸುವವರು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬೇಕು ಎಂದು ನಾಯ್ಡು ಹೇಳಿದ್ದಾರೆ.

ಹಿಂದಿನ ಪೀಳಿಗೆಯವರು ಹೆಚ್ಚು ಮಕ್ಕಳನ್ನು ಹೊಂದಿರುತ್ತಿದ್ದರು. ಆದರೆ ಈಗಿನ ಪೀಳಿಗೆಯವರು ಕೇವಲ ಒಂದು ಮಗು ಸಾಕು ಎನ್ನುತ್ತಿದ್ದಾರೆ. ಇನ್ನೂ ಕೆಲವು 'ಬುದ್ಧಿವಂತರು' ಆದಾಯ ಎರಡು ಪಟ್ಟಿರಲಿ -ಮಕ್ಕಳು ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ನಿಮ್ಮ ಪೋಷಕರು ನಾಲ್ಕೈದು ಮಕ್ಕಳನ್ನು ಹೊಂದಿರುತ್ತಿದ್ದರು. ನೀವು ಈಗ ಒಂದು ಮಗು ಸಾಕು ಎನ್ನುತ್ತಿದ್ದೀರಿ. ನಿಮ್ಮ ಪೋಷಕರೂ ಸಹ ನಿಮ್ಮಂತೆ ಯೋಚಿಸಿದ್ದರೆ ನೀವು ಈ ಭೂಮಿಗೆ ಬರಲು ಸಾಧ್ಯವೇ ಆಗುತ್ತಿರಲಿಲ್ಲ ಎಂದು ನಾಯ್ಡು ತಿಳಿಸಿದ್ದಾರೆ.

ದಕ್ಷಿಣ ಕೊರಿಯಾ ಹಾಗೂ ಜಪಾನ್ ಮತ್ತು ಯುರೋಪ್ ಖಂಡದಲ್ಲಿ ಜನಸಂಖ್ಯೆ ಕುಸಿಯುತ್ತಿದೆ. ಅಲ್ಲಿನ ಜನರು ಕೇವಲ ಆಸ್ತಿ ಸೃಷ್ಟಿ ಹಾಗೂ ಆದಾಯ ಹೆಚ್ಚಳದ ಬಗ್ಗೆ ಮಾತ್ರ ಯೋಚಿಸಿದ್ದರು. ಇದರಿಂದಾಗಿ ಕಠಿಣ ಪರಿಸ್ಥಿತಿ ಉಂಟಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ದಕ್ಷಿಣ ಕೊರಿಯಾ ಹಾಗೂ ಜಪಾನ್ ರೀತಿಯ ದೇಶಗಳಲ್ಲಿ ಜನನ ದರ ಕುಸಿಯುತ್ತಿದೆ. ಭಾರತ ಸಹ ಇದೇ ಪರಿಸ್ಥಿತಿ ಎದುರಿಸುವಂತಾಗಬಾರದು ಎಂದು ನಾಯ್ಡು ಈ ಹಿಂದೆಯೂ ಹೇಳಿದ್ದರು.

ಈಗಿನ ಕೆಲ ದಂಪತಿಗಳು ಮಕ್ಕಳನ್ನು ಹೊಂದಲು ಬಯಸುತ್ತಿಲ್ಲ. ಅವರು ತಮ್ಮ ಹಣವನ್ನು ಹಂಚಿಕೊಳ್ಳಲು ಇಷ್ಟಪಡುತ್ತಿಲ್ಲ ಹಾಗೂ ತಮ್ಮ ಸ್ವತ್ತು ತಮ್ಮ ಮೋಜಿಗೆ ಮಾತ್ರ ಇರಲಿ ಎಂದು ಬಯಸುತ್ತಿದ್ದಾರೆ ಎಂದು ನಾಯ್ಡು ಹೇಳಿದ್ದರು.

ಆಂಧ್ರಪ್ರದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜನಸಂಖ್ಯಾ ನಿರ್ವಹಣೆಯ ಅಗತ್ಯವಿದೆ ಎಂದು ನಾಯ್ಡು ಹೇಳಿದ್ದರು. 2047 ರವರೆಗೆ ನಮಗೆ ಜನಸಂಖ್ಯಾ ಲಾಭ ಸಿಗಲಿದೆ. ಅಲ್ಲಿಯವರೆಗೆ (2ನೇ ಪುಟಕ್ಕೆ)

# ಬಸವದೀಪ ಬೆಳಗಿದ ಪ್ರಾತಃಸ್ಮರಣೀಯ ಪೂಜ್ಯದ್ವಯರಿಗೆ ನುಡಿ ನಮನ

ಕರ್ನಾಟಕ ಸಂಸ್ಕೃತಿಯ ತವರೂರು, ಕಲೆಗಳ ನೆಲೆವೀಡು, ಕವಿಗಳ ನಾಡು, ಮಠಗಳ ಬೀಡು, ವಿವಿಧತೆಯಲ್ಲಿ ಏಕತೆಯನ್ನು ರೂಢಿಸಿಕೊಂಡಿರುವ ಶ್ರೇಷ್ಠ ನಾಡು, ವೈಚಾರಿಕ ಪ್ರಜ್ಞೆಯೊಂದಿಗೆ ತಾತ್ವಿಕ ತಳಹದಿ ಹಾಕಿಕೊಟ್ಟ ಶರಣರು, ಸಂತರು, ದಾಸರು ಮತ್ತು ದಾರ್ಶನಿಕರಿಂದ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ವಿವೇಕ, ಸಾಮ್ಯತೆ ಮುಂತಾದ ಮೌಲ್ಯಗಳು ನೆಲೆಸಿದ್ದು ಕನ್ನಡಿಗರ ಸಾಂಸ್ಕೃತಿಕ ಪ್ರಜ್ಞೆಗೆ ಕಳಶವಿಟ್ಟಂತಿವೆ. 12ನೇ ಶತಮಾನ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಹಲವಾರು ಶಿವಶರಣರು ಅವಿರತ ಶ್ರಮಿಸಿ, ಸಮಾನತೆಯ ಸಮಾಜ ನಿರ್ಮಿಸಿದ ಪರ್ವಕಾಲ.

ಕರ್ನಾಟಕದಲ್ಲಿ 12ನೇ ಶತಮಾನ ತುಂಬಾ ಪ್ರಮುಖವಾದದ್ದು. ಮನುಕುಲೋದ್ಧಾರದ ಹೊಂಗಿರಣವಾಗಿ ಸರಳತೆ, ಸುಲಲಿತ, ಸುಮಾಧುರ್ಯತೆಯ ಕಂಪನ್ನು ಸೂಸಿದ ವಿಶಿಷ್ಟ ಕಾಲಘಟ್ಟವಿದು. ಜಗದಣ್ಣ ಬಸವಣ್ಣನವರು ವಿಶ್ವ ಕಲ್ಯಾಣದ ಮಹಾಸಾಧನೆಯನ್ನು ಅನುಭವ ಮಂಟಪದಡಿಯಲ್ಲಿ ಸ್ಥಾಪಿಸಿ, ಸಾಮಾಜಿಕ ಕಳಕಳಿಯಿಂದ ಜೀವನವನ್ನು ವಿಭಿನ್ನ ದೃಷ್ಟಿಯಿಂದ ಗ್ರಹಿಸಿದರು. ಅಣ್ಣನ ಬೆಂಬಲಿಗರಾಗಿ ಹಲವಾರು ಶಿವಶರಣರು ಅವಿರತ ಶ್ರಮಿಸಿ, ಸಮಾನತೆಯ ಸಮಾಜ ನಿರ್ಮಿಸಿದರು.

21ನೇ ಶತಮಾನದಲ್ಲೂ ಕೂಡ ಬಸವ ಪರಂಪರೆಯನ್ನು ಅನುಸರಿಸಿ, ಅಣ್ಣನ ಕನಸುಗಳನ್ನು ನನಸು ಮಾಡಲು ತಾತ್ವಿಕ ಸಮಾಜದ ನಿರ್ಮಾಣಕ್ಕೆ ಕರ್ನಾಟಕದಲ್ಲಿ ಹಲವಾರು ಮಠಗಳು ಕಾರ್ಯಪ್ರವೃತ್ತವಾಗಿವೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಪಾಂಡೋಮಟ್ಟಿ ವಿರಕ್ತಮಠ ಬಸವ ತತ್ವದ ಪ್ರಚಾರದೊಂದಿಗೆ ಭಕ್ತರು ಸಮಾಜಮುಖಿ ಸೇವೆ ಮಾಡುತ್ತಾ, ಸ್ವಾಸ್ಥ್ಯ ಬದುಕನ್ನು ನಡೆಸಲು ಪ್ರೇರೇಪಿಸಿದೆ.

'ನ್ಯಾಯ, ನಿಷ್ಠೂರಿ ದಾಕ್ಷಿಣ್ಯಪರ ನಾನಲ್ಲ, ಲೋಕ ವಿರೋಧಿ ಶರಣನಾರಿಗೂ ಅಂಜುವುದಿಲ್ಲ' ಎಂಬ ತತ್ವವನ್ನು ಮೈಗೂಡಿಸಿಕೊಂಡಿದ್ದ ಪೂಜ್ಯ ಸಂಗಮನಾಥ ಸ್ವಾಮೀಜಿ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಹರಪನಹಳ್ಳಿ ತಾಲ್ಲೂಕಿನ ಕಮ್ಮತ್ತಹಳ್ಳಿಯಲ್ಲಿ ಬಸವ ತತ್ವ ಪ್ರಚಾರ ಮಾಡಿ ನಂತರ ಚನ್ನಗಿರಿ ತಾಲ್ಲೂಕಿನ ಬಿಲ್ಲಹಳ್ಳಿಗೆ ಬಂದು ನೆಲೆಸುತ್ತಾರೆ. ಇಲ್ಲಿ ಒಂದು ಚಿಕ್ಕ ಮಠವನ್ನು ನಿರ್ಮಿಸಿ, ಸೇವಾ ಕೈಂಕರ್ಯದಲ್ಲಿರುವಾಗ ಚನ್ನಬಸವ ಶಿವಯೋಗಿಗಳನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡುತ್ತಾರೆ. ಪೂಜ್ಯದ್ವಯರು ಧರ್ಮ ಪ್ರಚಾರದಲ್ಲಿ ನಿರತರಾಗಿದ್ದಾಗ ಪಾಂಡೋಮಟ್ಟಿಗೆ ಬಂದು ನೆಲೆಸುತ್ತಾರೆ. ಈ ಗ್ರಾಮದಲ್ಲಿ 1961ರ ಫೆಬ್ರವರಿ ತಿಂಗಳಲ್ಲಿ ಭಕ್ತರ ನೆರವಿನಿಂದ ವಿರಕ್ತಮಠ ನಿರ್ಮಾಣವಾಯಿತು.ಅಂದಿನಿಂದ ಪಾಂಡೋಮಟ್ಟಿ ಗ್ರಾಮ ಪೂಜ್ಯದ್ವಯರ ಪಾದಸ್ಪರ್ಶದಿಂದ ಪಾವನಮಟ್ಟಿಯಾಗಿ ಪರಿವರ್ತನೆಯಾಯಿತು. ಇಲ್ಲಿ ಶರಣ ತತ್ವವನ್ನು ಪ್ರಚಾರ ಮಾಡುವ ಏಕೋದ್ದೇಶದಿಂದ ಪ್ರತಿ ತಿಂಗಳ 3ನೇ ಶನಿವಾರ ಶಿವಾನುಭವ ಗೋಷ್ಠಿಯನ್ನು ನಡೆಸಿಕೊಂಡು ಬರುತ್ತಿದ್ದು, ಇಲ್ಲಿಯವರೆಗೂ 867 ಮಾಸಿಕ ಶಿವಾನುಭವ ಕಾರ್ಯಕ್ರಮಗಳು ನಡೆದಿರುವುದು ದಾಖಲೆಯ ವಿಚಾರ. 1962ರಲ್ಲಿ ಪೂಜ್ಯ ಸಂಗಮನಾಥ ಸ್ವಾಮೀಜಿ ಲಿಂಗೈಕ್ಯರಾದ ತರುವಾಯ, ಪೂಜ್ಯ ಚನ್ನಬಸವ ಶಿವಯೋಗಿಗಳು ನಾಡಿನೆಲ್ಲೆಡೆ ಸಂಚರಿಸುತ್ತಾ ಧರ್ಮ ಪ್ರಚಾರ ಮಾಡತೊಡಗಿದರು.





**ದಯೆ ಧರ್ಮದ ಮೂಲವಾಗಬೇಕು, ಪ್ರೀತಿ-ಅಂತಃಕರಣ ಉಸಿರಾಗಬೇಕು, ವಾತ್ಸಲ್ಯ-ಮಮಕಾರವನ್ನು ಪ್ರತಿಯೊಬ್ಬ ವ್ಯಕ್ತಿಯೂ ಮೈಗೂಡಿಸಿಕೊಳ್ಳಬೇಕು, ಮಾನವ ಮಹಾತ್ಮನಾಗಬೇಕು ಆಗಮಾತ್ರ ಜೀವನ ಸಾರ್ಥಕ ಎನ್ನುವಂತೆ ಬದುಕಿ, ವರ್ಣಭೇದ ವರ್ಗಭೇದ, ವಯೋಭೇದ, ಜಾತಿಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸುತ್ತಾ ವ್ಯಕ್ತಿಗೆ ಮಾನ್ಯತೆಯನ್ನು ಕೊಡದೆ ತತ್ವಕ್ಕೆ ಮಾನ್ಯತೆ ಕೊಟ್ಟಿದ್ದ ಪೂಜ್ಯ ಶ್ರೀ ಸಂಗಮನಾಥ ಸ್ವಾಮೀಜಿ ಮತ್ತು ಪೂಜ್ಯ ಶ್ರೀ ಚನ್ನಬಸವ ಶಿವಯೋಗಿಗಳ ಸ್ಮರಣೋತ್ಸವ ಇಂದಿನಿಂದ ಮೂರು ದಿನ ಪಾಂಡೋಮಟ್ಟಿ ವಿರಕ್ತ ಮಠದಲ್ಲಿ ನಡೆಯಲಿದೆ.**

**'ಬೆಳಗುವ ಜ್ಯೋತಿಯ ತಿರುಳಿನಂತೆ ಹೊಳೆವ ಕಂಗಳ ಕಾಂತಿ**
**ಒಳಹೊರಗೆನ್ನದೆ ಅಳವಟ್ಟ ಶಿವಯೋಗಿಯ ಕಂಡೆನಾ**
**ನಿಜವುಂಡ ನಿರ್ಮಳದ ಘನವ ಕಂಡು**
**ಬೆರಗಾದೆನು, ಗುಹೇಶ್ವರ ಲಿಂಗದಲ್ಲಿ ಚೆನ್ನ**
**ಬಸವಣ್ಣನಿಂದ ನಾನು ಬದುಕಿದೆನು'**

-ಎಂಬಂತೆ ಬದುಕಿದ ಪೂಜ್ಯ ಚನ್ನಬಸವ ಶಿವಯೋಗಿಗಳು ತಾವು ಬದುಕಿದ್ದ ಅವಧಿಯಲ್ಲಿ ಬಸವ ತತ್ವದಲ್ಲಿ ಮಿಂದು, ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸಿ, ನಡೆದಾಡುವ ದೇವರಾಗಿ ಕಂಗೊಳಿಸಿದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ತಮ್ಮ ಎಳೆಯ ವಯಸ್ಸಿನಲ್ಲಿ ಅಧ್ಯಾತ್ಮಿಕ ಚಿಂತನೆ ರೂಢಿಸಿಕೊಂಡು ಜೈನ ಸಾಹಿತ್ಯ, ವಚನ ಸಾಹಿತ್ಯದ ಆಳವಾದ ಅಧ್ಯಯನ ಮಾಡಿದ್ದರು. ತತ್ವಚಿಂತನೆ, ಸಾಹಿತ್ಯದ ಅಧ್ಯಯನ ಅವರ ಉಸಿರಾಗಿತ್ತು. 'ಪ್ರಭುದೇವ ಲಿಂಗಜ್ಞಾನ ಸಾಹಿತ್ಯ ಮಾಲೆ' ಅಡಿಯಲ್ಲಿ ಸಾಕಷ್ಟು ಪುಸ್ತಕಗಳನ್ನು ಪ್ರಕಟಿಸಿ ಸಹೃದಯರಿಗೆ ತಲುಪಿಸಿದ್ದಾರೆ. ಇದರ ಬೆಲೆ ಭಕ್ತಿಯಿಂದ ಓದಿ ಅನುಭಾವವನ್ನು ತಿಳಿದು ಆಚರಿಸುವುದೇ ಆಗಿದೆ ಎಂಬಲ್ಲಿ ಅವರ ಜ್ಞಾನದ ಪರಿಪೂರ್ಣತೆ ನಮಗೆ ಗೋಚರಿಸುತ್ತದೆ.

ಹಿರಿಯ ಪೂಜ್ಯರಾದ ಲಿಂ.ಸಂಗಮನಾಥ ಸ್ವಾಮೀಜಿಯ ಹೆಸರಿನಲ್ಲಿ ನೂರಾರು ತತ್ವಬದ್ಧವಾದ ಮೌಲ್ಯಗಳಿಂದ ಕೂಡಿದ ವಚನಗಳನ್ನು, ಷಟ್‌ಸ್ಥಲ ಪೂಜಾ ವಿಧಾನ, ಲಿಂಗವಂತರ ಆಚರಣೆಗಳು, ಬುದ್ಧಿಯ ಮಾತು, ಸ್ತ್ರೀ ನೀತಿ ಸಾರ, ಶಿವಾನುಭವ ಸೂತ್ರ, ವಚನಮಧು, ಬಸವ ಮಂತ್ರಸಾರ, ಚಿನ್ಮಯ ಜ್ಞಾನದೀಕ್ಷೆ, ಕರಣಹಸಿಗೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ವಚನಶಾಸ್ತ್ರ ಪಿತಾಮಹ ಫ.ಗು.ಹಳಕಟ್ಟಿಯವರು ಸಂಪಾದಿಸಿರುವ ಸಮಗ್ರ ವಚನಗಳನ್ನು ಅಧ್ಯಯನ ಮಾಡಿ, ಲಿಂಗಾಯತ ಧರ್ಮದ ತಿರುಳನ್ನು ಅರಿತು ಅಳವಡಿಸಿಕೊಂಡು ಶ್ರೀಮಠಕ್ಕೆ ಬರುತ್ತಿದ್ದ ಭಕ್ತವೃಂದಕ್ಕೆ ಬಹಳ ಕಳಕಳಿಯಿಂದ ತಿಳಿಸುತ್ತಿದ್ದರು. ಮೈಲಾರ ಬಸವಲಿಂಗ ಶರಣರು ರಚಿಸಿದ 'ಗುರುಕರಣ ತ್ರಿವಿಧಿ'ಯನ್ನು ವ್ಯಾಖ್ಯಾನ ಸಹಿತ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಬಸವ ತತ್ವವನ್ನು ನಾಡಿನಾದ್ಯಂತ ಪ್ರಚಾರ ಮಾಡುತ್ತಾ'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ, ಎನ್ನುವಂತೆ ಸದಾಕಾಲ ಕ್ರಿಯಾಶೀಲ ರಾಗಿದ್ದು, ಸರ್ವಸಮಾನತೆಯ ಪ್ರತಿಬಿಂಬದಂತಿದ್ದರು. ನಾಡಿನ ಹಲವಾರು ಮಠಗಳಿಗೆ ಸ್ವಾಮೀಜಿಗಳಾಗುವವರಿಗೆ ದೀಕ್ಷಾ ಸಂಸ್ಕಾರಕೊಟ್ಟ ಹಿರಿಮೆ ಪೂಜ್ಯರದ್ದು.

**ಇವನಾರವ ಇವನಾರವ ಇವನಾರವ ನೆಂದೆನಿಸದೆ**
**ಇವನಮ್ಮವ ಇವನಮ್ಮವನೆಂದೆನಿಸಯ್ಯಾ**

ಎಂಬ ವಚನದಂತೆ ದಯೆ ಧರ್ಮದ ಮೂಲವಾಗಬೇಕು, ಪ್ರೀತಿ-ಅಂತಃಕರಣ ಉಸಿರಾಗಬೇಕು, ವಾತ್ಸಲ್ಯ-ಮಮಕಾರವನ್ನು ಪ್ರತಿಯೊಬ್ಬ ವ್ಯಕ್ತಿಯೂ ಮೈಗೂಡಿಸಿಕೊಳ್ಳಬೇಕು, ಮಾನವ ಮಹಾತ್ಮನಾಗಬೇಕು. ಆಗ ಮಾತ್ರ ಜೀವನ ಸಾರ್ಥಕ ಎನ್ನುವಂತೆ ಬದುಕಿದರು. ವರ್ಣಭೇದ, ವರ್ಗಭೇದ, ವಯೋಭೇದ, ಜಾತಿಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸುತ್ತಿದ್ದರು. ವ್ಯಕ್ತಿಗೆ ಮಾನ್ಯತೆಯನ್ನು ಕೊಡದೆ ತತ್ವಕ್ಕೆ ಮಾನ್ಯತೆ ಕೊಟ್ಟಿದ್ದರು. ಭಕ್ತರಿಂದ ಕಾಣಿಕೆಯನ್ನು ಅಪೇಕ್ಷಿಸದೇ ಭಕ್ತರಿಗೆ ತೊಂದರೆಗೊಳಗಾದ ಭಕ್ತರಿಗೆ ಹಣ ನೀಡುತ್ತಿದ್ದ ಮೇರು ವ್ಯಕ್ತಿತ್ವ ಪೂಜ್ಯರದಾಗಿತ್ತು.

ಫಲವಿತ್ತರೆಂಬೆ ಬಾಗುತ್ತದೆ ಎನ್ನುವಂತೆ ಸದಾಕಾಲ ಬಾಗಿದ ತಲೆ, ಮುಗಿದ ಕೈಯಾಗಿರಿಸಿದಂತೆ ವಿನಯ ಗುಣವೇ ಮೈವೆತ್ತಂತೆ ಬಾಳಿದ ಪೂಜ್ಯರು ಕ್ರಿಯೆ ಜ್ಞಾನಗಳ ಸಾಕಾರ ಮೂರ್ತಿಗಳಾಗಿ, ನಾಡಿನಾದ್ಯಂತ ಹಲವಾರು ಭಕ್ತರಿಗೆ ನಡೆ ನುಡಿ ಕಲಿಸಿದರು. ತಂದೆ-ತಾಯಿಗಳಿಗೆ ಗೌರವ ಕೊಡಿ, ಪ್ರೀತಿ ವಿಶ್ವಾಸದಿಂದಿರಿ, ಇಷ್ಟಲಿಂಗ ಧಾರಣೆ ಮಾಡಿಕೊಳ್ಳಿ, ಭಸ್ಮಧರಿಸಿ ವಚನಗಳನ್ನು ಅಭ್ಯಾಸ ಮಾಡಿ ಎಂದು ತಿಳಿಸುತ್ತಾ ಮನುಷ್ಯ ಹೇಗೆ ಬಾಳಬೇಕೆಂದು ತೋರಿಸಿಕೊಟ್ಟರು. 93 ವರ್ಷಗಳ ಕಾಲ ಬದುಕಿ ಬಸವದೀಪ ಬೆಳಗಿದ ಶ್ರೀ ಗಳು ಉತ್ತಮ ಸಾಧನೆಯೊಂದಿಗೆ ಆಧ್ಯಾತ್ಮದ ಉತ್ತುಂಗ ಶಿಖರಕ್ಕೇರಿ ಭಕ್ತರ ಮನದಲ್ಲಿ ಇಂದಿಗೂ ನೆಲೆಸಿದ್ದಾರೆ.

**ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ**
**ಮುಂದಣ ಫಲದೊಳಗರಸಿಕೊ**
**ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ**
**ಮುಂದಣ ಬಣ್ಣದೊಳಗರಸಿಕೊ**
**ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ**
**ಮುಂದಣ ಅಗ್ನಿಯೊಳಗರಸಿಕೋ.**

ಎಂಬ ಚನ್ನಬಸವಣ್ಣನವರ ವಚನದಂತೆ ಹಿರಿಯ ಪೂಜ್ಯದ್ವಯರು ಬಿತ್ತಿದ ಬೆಳೆ ಈಗಿನ ವಿರಕ್ತಮಠದ ಸ್ವಾಮೀಜಿಗಳಾದ ಡಾ. ಗುರುಬಸವ ಶಿವಯೋಗಿಗಳ ರೂಪದಲ್ಲಿ ಭಕ್ತರಿಗೆ ತಲುಪುತ್ತಿದೆ. ಯಾವುದೇ ಜಾತಿ, ಪಂಗಡಗಳನ್ನು ಗಮನಿಸದೆ, ಎಲ್ಲರನ್ನು ಸಮಾನತೆಯ ಭಾವದಿಂದ ನೋಡುತ್ತಾ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕ ವಾಗಿ ಸೇವೆಯನ್ನು ಮುಂದುವರೆಸಿರುವ ಶ್ರೀ ಮಠ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನೈತಿಕ ತಳಹದಿಯ ಮೇಲೆ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಜ್ಞಾನ ದಾಸೋಹ ನೀಡುತ್ತಾ ಬಂದಿದೆ. ಪೂಜ್ಯ ಶ್ರೀ ಗುರುಬಸವ ಸ್ವಾಮೀಜಿಯವರು ನಾಡಿನ ಎಲ್ಲ ಕಡೆ ಬಸವ ತತ್ವವನ್ನು ಪ್ರಚಾರ ಮಾಡುತ್ತಾ ಹಿರಿಯ ಸ್ವಾಮೀಜಿಯವರ ಕನಸನ್ನು ನನಸುಗೊಳಿಸುತ್ತಿದ್ದಾರೆ. ಪೂಜ್ಯರ ಸಾನ್ನಿಧ್ಯದಲ್ಲಿ ಲಿಂಗೈಕ್ಯ ಸಂಗಮನಾಥ ಸ್ವಾಮೀಜಿಯವರ 63 ನೇ ಲಿಂ.ಚನ್ನಬಸವ ಶಿವಯೋಗಿಗಳ 18 ನೇ ಸ್ಮರಣೋತ್ಸವ ಹಾಗೂ ಬಸವ ತತ್ವ ಸಮ್ಮೇಳನ ಜನವರಿ 17 ರಿಂದ 19 ವರೆಗೆ ನಡೆಯಲಿದೆ.

**ಈ ನಾಡಿನ ಬಿದಿರು ಕೊಳಲು ಆಗಲು**
**ಸೋರೆ ವೀಣೆಯಾಗಲು**
**ಉಕ್ಕು ಉಳಿಯಾಗಲು ಅಕ್ಕಿ ಅನ್ನವಾಗಲು**
**ಹತ್ತಿ ವಸ್ತ್ರವಾಗಲು ಸಂಸ್ಕೃತಿ ಉಳಿದು ಬೆಳೆಯಲು**
**ಬಸವ ತತ್ವದ ಹಣತೆ ಬೆಳಗಲು**
**ಗುರುವಿನ ಬೋಧನೆಯು ಅವಶ್ಯಕ**

ಬನ್ನಿ ಬಸವ ದೀಪವನ್ನು ಮನೆ ಮನೆಗಳಲ್ಲಿ, ಭಕ್ತರ ಮನ ಮನಗಳಲ್ಲಿ ಹೊತ್ತಿಸಿದ ಪೂಜ್ಯದ್ವಯರಿಗೆ ನಾವೆಲ್ಲರೊಂದಾಗಿ ಭಕ್ತಿ ಪೂರ್ವಕ ನುಡಿ ನಮನ ಸಲ್ಲಿಸೋಣ.



- ಡಾ.ಗೀತಾ ಬಸವರಾಜು,
ಉಪನ್ಯಾಸಕರು,
ಎ.ವಿ.ಕೆ ಮಹಿಳಾ ಕಾಲೇಜು,
ದಾವಣಗೆರೆ.

# ಸನ್ಯಾಸಿಗಳ ಮೆರವಣಿಗೆಯಲ್ಲಿ ರಥವೇರಿದ ಇನ್‌ಫ್ಲುಯನ್ಸರ್

**ಮಹಾ ಕುಂಭಮೇಳದಲ್ಲಿ ವಿವಾದ**

ಮಹಾಕುಂಭನಗರ, ಜ.16- ಇಲ್ಲಿ ನಡೆಯುತ್ತಿರುವ ಮಹಾಕುಂಭದಲ್ಲಿ ಸನ್ಯಾಸಿಗಳು ಪ್ರವೇಶ ಮಾಡುವಾಗ ಇನ್‌ಫ್ಲುಯನ್ಸರ್ ಹರ್ಷಾ ರಿಚಾರಿಯ ಅವರು ಸನ್ಯಾಸಿಗಳ ಜೊತೆ ರಥದಲ್ಲಿ ಕುಳಿತುಕೊಂಡಿದ್ದು ವಿವಾದಕ್ಕೆ ಕಾರಣವಾಗಿದೆ.

ಸನ್ಯಾಸಿಗಳ ಜೊತೆ ರಥದಲ್ಲಿ ರಿಚಾರಿಯ ಕುಳಿತುಕೊಂಡಿದ್ದಕ್ಕೆ ಆಕ್ಷೇಪಿಸಿರುವ ಕಾಳಿ ಸೇನಾ ಮುಖ್ಯಸ್ಥ ಸ್ವಾಮಿ ಆನಂದ ಸ್ವರೂಪ, ಕುಂಭಮೇಳ ಆಯೋಜಿಸಿರುವುದು ಜ್ಞಾನ ಹಾಗೂ ಅಧ್ಯಾತ್ಮಕ್ಕೆ. ಇದನ್ನು ಮಾಡೆಲ್‌ಗಳು ಪ್ರಚಾರಕ್ಕಾಗಿ ಬಳಸಿಕೊಳ್ಳಬಾರದು ಎಂದು ಹೇಳಿದ್ದಾರೆ.



ಕುಂಭಮೇಳದಲ್ಲಿ ಕೇಸರಿ ಉಡುಗೆಯಲ್ಲಿ ರಿಚಾರಿಯ ಅವರು ಕಾಣಿಸಿಕೊಂಡಿದ್ದು ಹಲವು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ, ನಾನು ಸನ್ಯಾಸಿನಿಯಾಗಿಲ್ಲ ಎಂದು ರಿಚಾರಿಯ ಸ್ಪಷ್ಟನೆ ನೀಡಿದ್ದಾರೆ. ಆದರೆ ಇದರಲ್ಲಿ ವಿವಾದವಾಗುವಂತಹದ್ದು ಏನೂ ಇಲ್ಲ ಎಂದು ಹೇಳಿರುವ ಅಖಿಲ ಭಾರತೀಯ ಅಖಾಡ ಪರಿಷತ್ ಅಧ್ಯಕ್ಷ ಮಹಾಂತ ರವೀಂದ್ರಪುರಿ, ಕೇಸರಿ ವಸ್ತ್ರ ಧರಿಸುವುದು ಅಪರಾಧವಲ್ಲ. ನಿರಂಜನಿ ಅಖಾಡದ ಮಹಾಮಂಡಲೇಶ್ವರರಿಂದ ಅವರು ಮಂತ್ರ ದೀಕ್ಷೆ ಪಡೆದಿರಬಹುದು ಎಂದಿದ್ದಾರೆ.

ಫೇಸ್‌ಬುಕ್‌ನಲ್ಲಿ ಹೇಳಿಕೆ ನೀಡಿರುವ ಸ್ವಾಮಿ ಆನಂದ ಸ್ವರೂಪ, ರಿಚಾರಿಯ ಅವರು ರಥವೇರಿದ ಬಗ್ಗೆ ನಿರಂಜನಿ ಅಖಾಡ ಅಧ್ಯಕ್ಷ ಮಹಾಂತ ರವೀಂದ್ರಪುರಿ ಅವರ ಜೊತೆ ಮಾತನಾಡಿದ್ದೇನೆ. ಕುಂಭಮೇಳ ಇರುವುದು ಜಪ, ತಪ ಹಾಗೂ ಜ್ಞಾನಕ್ಕಾಗಿ. ಅನುಚಿತವಾಗಿ ವರ್ತಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇನೆ ಎಂದಿದ್ದಾರೆ.

ಈ ಬಗ್ಗೆ ಮಾತನಾಡಿರುವ ಮಹಾಂತ ರವೀಂದ್ರಪುರಿ ಅವರು, ರಿಚಾರಿಯ ಅವರು ನಿರಂಜನಿ ಅಖಾಡದ ಮಹಾಮಂಡಲೇಶ್ವರರೊಬ್ಬರಿಂದ ದೀಕ್ಷೆ ಪಡೆದಿದ್ದಾರೆ ಎಂದು ಹೇಳಿದರು.

ರಿಚಾರಿಯ ಅವರು ರಾಮನಾಮ ವಸ್ತ್ರವನ್ನು ಧರಿಸಿದ್ದಾರೆ. ನಮ್ಮ ಸಂಪ್ರದಾಯದಂತೆ ಅವರು ಕೇಸರಿ ವಸ್ತ್ರ ಧರಿಸಿದ್ದಾರೆ. ಇದು ಅಪರಾಧವೇನೂ ಅಲ್ಲ. ಅವರು ಮಾಡೆಲ್ ಆಗಿರುವ ಕಾರಣಕ್ಕಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗುತ್ತಿದೆ ಎಂದು ರವೀಂದ್ರಪುರಿ ಹೇಳಿದ್ದಾರೆ.

ನಮ್ಮಲ್ಲಿ ಒಂದು ದಿನ, ಐದು ದಿನ ಇಲ್ಲವೇ ಏಳು ದಿನಗಳಿಗೆ ದೀಕ್ಷೆ ಪಡೆಯುವ ಪದ್ಧತಿ ಇದೆ. ಅದರಂತೆ ರಿಚಾರಿಯ ಅವರು ಮಂತ್ರ ದೀಕ್ಷೆ ಪಡೆದಿದ್ದಾರೆ.

ಅವರು ಸನ್ಯಾಸಿನಿ ಆಗಿಲ್ಲ. ಅವರು ಕೇವಲ ಮಂತ್ರ ದೀಕ್ಷೆ ಪಡೆದು ರಥದ ಮೇಲೆ ಕುಳಿತಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

# ದಕ್ಷಿಣ ಆಫ್ರಿಕಾದ ಚಿನ್ನದ ಗಣಿಯಲ್ಲಿ ಹೆಣಗಳ ರಾಶಿ



ಸ್ಟಿಲ್‌ಫೊಂಟೇನ್, ಜ.16- ದಕ್ಷಿಣ ಆಫ್ರಿಕಾದಲ್ಲಿರುವ ಚಿನ್ನದ ಗಣಿಗಳಲ್ಲಿ ಈಗ ಹೆಣದ ರಾಶಿಗಳೇ ಕಂಡು ಬಂದಿವೆ. ದಕ್ಷಿಣ ಆಫ್ರಿಕಾದ ಮುಚ್ಚಲಾದ ಚಿನ್ನದ ಗಣಿಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗುತ್ತಿತ್ತು. ಈ ರೀತಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದವರು ಅದರಲ್ಲಿ ಸಿಲುಕಿ ಸಾವನ್ನಪ್ಪಿದ್ದಾರೆ.

ದಕ್ಷಿಣ ಆಫ್ರಿಕಾ ಸರ್ಕಾರ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿತ್ತು. ಗಣಿಗಳಲ್ಲಿ ಸಿಲುಕಿದವರಿಗೆ ಆಹಾರ ಹಾಗೂ ಇತರೆ ಅಗತ್ಯ ವಸ್ತುಗಳ ಪೂರೈಕೆಯನ್ನು ನಿಲ್ಲಿಸುವ ಮೂಲಕ ಅವರು ಗಣಿಗಳಿಂದ ಹೊರಬರಲು ಒತ್ತಡ ಹೇರಲಾಗಿತ್ತು.

ಆದರೆ, ಕೋರ್ಟ್ ಆದೇಶದ ನಂತರ ಮೂರು ದಿನ ರಕ್ಷಣಾ ಕಾರ್ಯಾಚರಣೆ ನಡೆಸಲಾಗಿದೆ. ಈ ವೇಳೆ 246 ಜನರನ್ನು ರಕ್ಷಿಸಲಾಗಿದೆ. 78 ಮೃತದೇಹಗಳನ್ನು ಹೊರಕ್ಕೆ ತರಲಾಗಿದೆ. ಒಟ್ಟಾರೆ ಮೃತರ ಸಂಖ್ಯೆ 87ಕ್ಕೆ ತಲುಪಿದೆ. ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದ್ದು ಗಣಿಗಳಲ್ಲಿ ಯಾರೂ ಉಳಿದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದವರಿಗೆ ಹೊರ ಬರಲು ಇದ್ದ ಸಾಧನಗಳನ್ನು ಸರ್ಕಾರ ಹಿಂಪಡೆದುಕೊಂಡಿದೆ ಎಂದು ನಾಗರಿಕ ಹಕ್ಕುಗಳ ಗುಂಪುಗಳು ಆರೋಪಿಸಿದ್ದವು. ಕಳೆದ ಒಂದು ವಾರದಿಂದ ಸರ್ಕಾರ ನೆರವು ಕಾರ್ಯಾಚರಣೆಯನ್ನು ನಿಲ್ಲಿಸಿದೆ. ಇದರಿಂದಾಗಿ ಅಕ್ರಮವಾಗಿ ಗಣಿಗಾರಿಕೆಯಲ್ಲಿ ತೊಡಗಿದವರು ನಿರ್ಜಲೀಕರಣ ಹಾಗೂ ಹಸಿವಿನಿಂದ ಸಾವನ್ನಪ್ಪಿದ್ದಾರೆ ಎಂದು ಸಂಘಟನೆಗಳು ಹೇಳಿದ್ದವು.

ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದವರು ಹೊರಬರಲು ಮಾರ್ಗ ಇದೆ ಎಂದು ದಕ್ಷಿಣ ಆಫ್ರಿಕಾದ ಅಧಿಕಾರಿಗಳು ತಿಳಿಸಿದ್ದರು. ಆದರೆ ಸರ್ಕಾರ ತಿಳಿಸುತ್ತಿರುವ ಬಫೆಲ್ ಸ್ಫೊಂಟಿ ಗಣಿ ಮಾರ್ಗವು ಅತ್ಯಂತ ದುರ್ಗಮವಾಗಿದೆ. ಹಲವು ತಿಂಗಳುಗಳಿಂದ ಗಣಿಗಳಲ್ಲಿ ಸಿಲುಕಿರುವ ಜನರು ಹೊರಬರಲು ತೀವ್ರ ಸಮಸ್ಯೆ ಇದೆ. ಗಣಿಗಳಲ್ಲಿ ಕನಿಷ್ಠ ನೂರು ಜನ ಸಾವನ್ನಪ್ಪಿದ್ದಾರೆ ಎಂದು ಸಂಘಟನೆಗಳು ಆರೋಪಿಸಿದ್ದವು.

ಆದರೆ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದವರು ಹೊರಬರಲು ಸಿದ್ದರಿಲ್ಲ ಎಂದು ಪೊಲೀಸರು ಹೇಳಿದ್ದರು. ಈ ಸಾವುಗಳ ಕುರಿತು ಸ್ವತಂತ್ರ ತನಿಖೆ ನಡೆಸಬೇಕು ಎಂದು ರಾಜಕೀಯ ಪಕ್ಷಗಳು ಒತ್ತಾಯಿಸಿವೆ.

ಗಣಿಗಳಲ್ಲಿ ಸಿಲುಕಿರುವವರನ್ನು ಹೊರ ತರಲು ಕಂಪನಿಯೊಂದರ ವಿಶೇಷ ತಂಡವೊಂದನ್ನು ರೂಪಿಸಿತ್ತು. ಆದರೆ ಈ ಗಣಿಗಳು ತೀವ್ರ ಅಪಾಯಕಾರಿಯಾಗಿರುವುದರಿಂದ ಇದರಲ್ಲಿ ರಕ್ಷಣಾ ಕಂಪನಿಯ ತನ್ನ ಯಾವುದೇ ಸಿಬ್ಬಂದಿಯನ್ನು ಕಳಿಸಿರಲಿಲ್ಲ. ಸಮುದಾಯದ ಸ್ವಯಂಪ್ರೇರಿತ ಕಾರ್ಯಕರ್ತರು ನೆರವು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಅಕ್ರಮ ಗಣಿಗಾರಿಕೆಯ ವಿರುದ್ಧ ಕಳೆದ ನವೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿತ್ತು. ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದವರ ಆಹಾರ ಪೂರೈಕೆ ಮಾರ್ಗಗಳನ್ನು ಮುಚ್ಚಲಾಗಿತ್ತು. ನಂತರ ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು.

ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವವರಿಗೆ ಸಮರ್ಪಕ ಆಹಾರ ಹಾಗೂ ನೀರು ಪೂರೈಕೆಗೆ ವ್ಯವಸ್ಥೆ ಮಾಡಬೇಕು ಎಂದು ನಾಗರಿಕ ಹಕ್ಕುಗಳ ಸಂಘಟನೆಗಳು ವಾದ ಮಂಡಿಸಿದ್ದವು.

ಸ್ಟೀಲ್‌ಫೊಂಟೇನ್ ನಗರದ ಬಳಿ ಇರುವ ಗಣಿಯಲ್ಲಿ ಸುಮಾರು 2.5 ಕಿಲೋ ಮೀಟರ್ ಆಳದಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗುತ್ತಿತ್ತು. ರಕ್ಷಣಾ ಕಾರ್ಯಾಚರಣೆ ಆರಂಭಿಸಿದ ಸಂದರ್ಭದಲ್ಲಿ ಈ ಗಣಿಗಳಲ್ಲಿ ಸುಮಾರು 500 ಜನ ಇದ್ದಾರೆ ಎಂದು ಅಂದಾಜಿಸಲಾಗಿತ್ತು. ಅವರು ಎಷ್ಟು ದಿನಗಳಿಂದ ಗಣಿಗಳಲ್ಲಿ ಇದ್ದಾರೆ ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಕೆಲವರು ಜುಲೈ ತಿಂಗಳಿನಿಂದಲೂ ಗಣಿಗಳಲ್ಲಿ ಇದ್ದಾರೆ ಎಂದು ಹೇಳಲಾಗುತ್ತಿದೆ.


ಅತ್ಯಂತ ಆಳವಾದ ಗಣಿಗಳಲ್ಲಿ ಜನರು ಸಿಲುಕಿರುವ ಕಾರಣ ನೆರವು ಕಾರ್ಯಾಚರಣೆ ಕಠಿಣವಾಗಿತ್ತು. ಗಣಿಗಳಿಂದ ಹೊರಬರುವವರನ್ನು ಪೊಲೀಸರು ಬಂಧಿಸಿದ್ದಾರೆ. ರಕ್ಷಣಾ ಕಾರ್ಯಚರಣೆ ನಂತರವೂ ಹೊರಬಂದವರನ್ನು ಬಂಧಿಸಲಾಗುವುದು ಎಂದು ಪೊಲೀಸರು ಹೇಳಿದ್ದರು.

ದಕ್ಷಿಣ ಆಫ್ರಿಕಾದ ಹಲವು ಚಿನ್ನದ ಗಣಿಗಳು ಲಾಭದಾಯಕವಾಗಿಲ್ಲ ಎಂದು ಕಂಪನಿಗಳು ಕಾರ್ಯಾಚರಣೆ ನಿಲ್ಲಿಸಿದ್ದವು. ಇಂತಹ ಗಣಿಗಳಲ್ಲಿ ಚಿನ್ನ ಹುಡುಕಲು ಅಕ್ರಮ ಗಣಿಗಾರಿಕೆ ದಂಧೆ ನಡೆಯುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ಈ ರೀತಿಯ ಸುಮಾರು 6 ಸಾವಿರ ಗಣಿಗಳಿವೆ ಎಂದು ಅಂದಾಜಿಸಲಾಗಿದೆ.

ಅಕ್ರಮ ಗಣಿಗಾರಿಕೆ ದಕ್ಷಿಣ ಆಫ್ರಿಕಾದಲ್ಲಿ ಕಾನೂನು ವ್ಯವಸ್ಥೆಗೆ ಸವಾಲಾಗಿತ್ತು. ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ ಸಶಸ್ತ್ರ ಗುಂಪುಗಳು ಅಪರಾಧಿಕ ಕೃತ್ಯಗಳಲ್ಲೂ ಭಾಗಿಯಾಗುತ್ತಿದ್ದವು. ನೆರೆ ದೇಶಗಳಿಂದ ಬಂದವರೂ ಸಹ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದು ಕಂಡು ಬಂದಿದೆ.

ಇದರಿಂದಾಗಿ ಸರ್ಕಾರಕ್ಕೆ ವರ್ಷಕ್ಕೆ ಒಂದು ಶತಕೋಟಿ ಡಾಲರ್ ನಷ್ಟವಾಗುತ್ತಿದೆ ಎಂದು ಅಂದಾಜಿಸಲಾಗಿದೆ. ಕಳೆದ ಒಂದು ವರ್ಷದಲ್ಲಿ ಸ್ಟಿಲ್‌ಫೊಂಟೇನ್ ನಗರದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ 1500ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿತ್ತು.

# ನಗರದ ಆರ್.ಟಿ.ಓ. ಕಚೇರಿಯಲ್ಲಿ ರಸ್ತೆ ಸುರಕ್ಷತಾ ಜಾಗೃತಾ ಮಾಸಾಚರಣೆ



ದಾವಣಗೆರೆ, ಜ. 16 - ರಸ್ತೆ ಸುರಕ್ಷತಾ ಜಾಗೃತಾ ಮಾಸಾಚರಣೆ ಉದ್ಘಾಟನಾ ಸಮಾರಂಭವನ್ನು ಗುರುವಾರ ಸಾರಿಗೆ ಕಚೇರಿಯ ಸಭಾಂಗಣದಲ್ಲಿ ನೆರವೇರಿಸಲಾಯಿತು. ಪ್ರಮುತೇಶ್ ಪ್ರಾದೇಶಿಕ ಸಾರಿಗೆ ಅಧಿಕಾರಿ, ನಾಗೇಶ್ ಪ್ರಾಧ್ಯಾಪಕರು ಯು.ಬಿ.ಡಿ.ಟಿ. ತಾಂತ್ರಿಕ ವಿದ್ಯಾಲಯ ಸಂಪನ್ಮೂಲ ವ್ಯಕ್ತಿಯಾಗಿ ಹಾಜರಿದ್ದು ಉಪನ್ಯಾಸ ನೀಡಿದರು. ದಾವಣಗೆರೆ ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ನಯ್ಯದ್ ಸೈಫುಲ್ಲಾ, ಮೋಟಾರು ಚಾಲನಾ ತರಬೇತಿ ಶಾಲೆಯ ಪ್ರಾಂಶುಪಾಲರು. ಕಚೇರಿಗೆ ಆಗಮಿಸಿದ ಸಾರ್ವಜನಿಕರಿಗೆ ರಸ್ತೆ ನಿಯಮಗಳ ಪಾಲನೆಗೆ ಅರಿವು ಮೂಡಿಸಲಾಯಿತು.

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಮಾರಾಟಕ್ಕಿದೆ**
ಶಿರಾ ಹತ್ತಿರದ ಮದ್ದನಾಯಕನಹಳ್ಳಿಯ 6x2, 6x3, 6x4 ಅಡಿಗಳ ಅಳತೆಯ ಕಲ್ಲುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
94480 28103
4 PM to 8 PM

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಗೋಡೌನ್ ಬಾಡಿಗೆಗೆ**
20 HP ಕರೆಂಟ್, 4,000 ಅಡಿ + ಸ್ಟೋರೇಜ್ 2,500 ಅಡಿ ಕರೂರು ಇಂಡಸ್ಟ್ರಿಯಲ್ ಏರಿಯಾ KIADB ಗೋಡೌನ್ ಬಾಡಿಗೆಗೆ ಮತ್ತು ಹಳೆಯ ಡೈನಿಂಗ್ ಚೇರ್‌ಗಳು ಸೇಲ್‌ಗೆ ಇವೆ.
98459 77475
92421 45611

**ಮನೆ ಬಾಡಿಗೆಗೆ ಇದೆ**
2BHK ನೆಲ ಮಹಡಿ, 3BHK 2ನೇ ಮಹಡಿ, ಮುನ್ಸಿಪಲ್ /ಬೋರ್ ವ್ಯವಸ್ಥೆ ಇದೆ. #686, ಶ್ರೀ ರಾಮ ನಿವಾಸ, PJ ಬಡಾವಣೆ 8ನೇ ಮುಖ್ಯ ರಸ್ತೆ, ದಾವಣಗೆರೆ. ಲೂರ್ಡ್ಸ್ ಬಾಯ್ಸ್ ಶಾಲೆ ಹತ್ತಿರ.
8792662185, 9632555910

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಸಪ್ಲೈಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ. ಜಯನಗರ 'ಬಿ' ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ. ಸಂಪರ್ಕಿಸಿ :
99861 62462, 97420 97140

**ಬೇಕಾಗಿದ್ದಾರೆ**
ಭಾರತ್ ಪೆಟ್ರೋಲಿಯಂ ಪೆಟ್ರೋಲ್ ಬಂಕ್ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ. ಐಟಿಐ ಕಾಲೇಜ್ ಎದುರು, ಹದಡಿ ರಸ್ತೆ, ದಾವಣಗೆರೆ. (ಬೆ. 10 ರಿಂದ ಮ. 1ರ ನಡುವೆ ಕರೆ ಮಾಡಿ)
72044 31117

**ಬೇಕಾಗಿದ್ದಾರೆ**
ಆದಿತ್ಯ ಬಿರ್ಲಾ ಲೆನಿನ್ ಕ್ಲಬ್
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮ್ಯಾನ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಶಾಮನೂರು ರೋಡ್, ದಾವಣಗೆರೆ.
74114 07411

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
ಮೊ. 91108 97420

**ಬೇಕಾಗಿದ್ದಾರೆ**
ವಸತಿ ಗೃಹ (ಲಾಡ್ಜ್)ದಲ್ಲಿ ಕೆಲಸ ಮಾಡಲು ಹೌಸ್‌ಮನ್ ಹಾಗೂ ಬಾತ್‌ರೂಂ ಕ್ಲೀನಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಆಕರ್ಷಕ ಸಂಬಳ ಕೊಡಲಾಗುವುದು.
9606096697, 9743482996
97423 87045

**ಸಿಸಿ ಟಿವಿ ಕೆಲಸಕ್ಕೆ ಎಲೆಕ್ಟ್ರೀಷಿಯನ್ಸ್ ಹುಡುಗರು ಬೇಕಾಗಿದ್ದಾರೆ**
R COMPUTERS
ಡೆಂಟಲ್ ಕಾಲೇಜ್ ರಸ್ತೆ, ಹೋಟೆಲ್ ಸರೋವರ ಹತ್ತಿರ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ-4.
8722113803 9611877204

**ಸೈಟು ಮಾರಾಟಕ್ಕಿದೆ**
30x40 ಉತ್ತರ, 30x30 ದಕ್ಷಿಣ, ಹೊಸ ಸರ್ ಎಂ.ವಿ ಕಾಲೇಜು ಹಿಂಭಾಗ
77600 70828

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ತಕ್ಷಣ ಬೇಕಾಗಿದ್ದಾರೆ**
25 ವರ್ಷದೊಳಗಿನ ಯುವಕ/ಯುವತಿಯರು ಬೇಕಾಗಿದ್ದಾರೆ.
ನ್ಯೂರೋಥೆರೇಪಿ ಕೇಂದ್ರ, ದಾವಣಗೆರೆ.
ಉಚಿತ ತರಬೇತಿ, 9 ರಿಂದ 12 ಸಾವಿರ ಸಂಬಳ, ಉಚಿತ ವಸತಿ. ಸಂಪರ್ಕಿಸಿ:
99726 00713

**1946 ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ. ಸ್ಥಳ : 1946 ಪ್ರಕಾಶ್ ಕಾಫಿ ವರ್ಕ್ಸ್ ದಾವಣಗೆರೆ.
99004 38052, 97401 53513

**WANTED HELPERS**
Contact Personally
CINDRELLA CHOCLATE SHOP
Vidyanagar
1st Buststop Davanagere
63603 34198

**Available Two Independent 2 BHK Homes**
One at Ground floor (Un Furnished) and Other at 1st floor (Well Furnished) for Decent Families Located Near Punjab national Bank On P.B. Road, The Homes are Easily Accessible to Old/New Bus Stand, Railway station Reliance Mart Etc., Contact :
91080 29438

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

ಜನ ಆಶಾ ಸೌತ್ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರ್ ಬೇಕಾಗಿದ್ದಾರೆ**
RBI APPROVED
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF Health Insurance ಸೌಲಭ್ಯವಿರುತ್ತದೆ
96864 12409

**WANTED TEACHERS**
B.Sc - 2
BA / B.Sc / B.Com - 1
Computer Teacher - 1
SRP CONVENT
17th Cross Anjaneya Layout, Dvg
95903 99449, 91136 31266

**ಹೋಟೆಲ್ ಫುಡೀಸ್‌ಗೆ ಬೇಕಾಗಿದ್ದಾರೆ**
ವೈಟರ್, ಸ್ಟೀವರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಪಾರ್ಟ್ ಟೈಂ, ಫುಲ್ ಟೈಂ. ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪ ಹತ್ತಿರ, ದಾವಣಗೆರೆ.
98861 56688

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 31-01-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ಹೊರನಾಡು ಅನ್ನಪೂರ್ಣೇಶ್ವರಿ ಜ್ಯೋತಿಷ್ಯಫಲಂ**
ವಶೀಕರಣ ಸ್ಪೆಷಲಿಸ್ಟ್
ಪ॥ ಆರ್ಯವರ್ಧನ್ ಗುರೂಜಿ
ಸ್ತ್ರೀ-ಪುರುಷ ವಶೀಕರಣ ಗುಪ್ತಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 3 ದಿನದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ :
96324 03852

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ವೃದ್ಧಾಶ್ರಮ**
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ
ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ॥, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
99001 42052, 97319 93770

**FOR LEASE / RENT**
20000 Sqft of open land
5000 Sqft of Godown with power, water, safety walls available for Industry / Commercial purpose.
97403 10044

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ. 1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ನೀವು ಇಷ್ಟ ಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ : ಗಾಂಧಿ ಸರ್ಕಲ್, ದಾವಣಗೆರೆ
89716 99826

# ನಗರದಲ್ಲಿ 'ದಂತ ಭಾಗ್ಯ' ಶಿಬಿರದ ಉದ್ಘಾಟನೆ



ದಾವಣಗೆರೆ, ಜ. 16- ರಾಜ್ಯ ಸರ್ಕಾರದ ಯೋಜನೆಯ ಭಾಗವಾಗಿ ನಗರದ ಬಾಪೂಜಿ ವಿದ್ಯಾಸಂಸ್ಥೆಯ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್‌ನಲ್ಲಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ದಂತ ಭಾಗ್ಯ ಶಿಬಿರವನ್ನು ಉದ್ಘಾಟಿಸಿದರು.

ಶಿಬಿರದಲ್ಲಿ ಹಾವೇರಿ ಜಿಲ್ಲೆಯ 37 ಫಲಾನುಭವಿ ಗಳಿಗೆ ಉಚಿತ ದಂತ ಪಂಕ್ತಿಗಳನ್ನು 'ಪ್ರಾಸ್ತೋಡಾಂಟಿಕ್ ಡೇ' ಅಂಗವಾಗಿ ಇದೇ ದಿನಾಂಕ 23ರ ಗುರುವಾರ ಉಚಿತವಾಗಿ ವಿತರಿಸಲಾಗುವುದು.

ದಂತ ವೈದ್ಯರೂ ಆಗಿರುವ ಸಂಸದರಾದ ಡಾ. ಪ್ರಭಾ ಮಾತನಾಡಿ, ಬಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದರು. ಇಲ್ಲಿನ ಕೃತಕ ದಂತ ಜೋಡಣಾ ವಿಭಾಗದಿಂದ ನಿಯಮಿತವಾಗಿ ನಡೆಯುತ್ತಿರುವ ಶಿಬಿರದ ಬಗ್ಗೆ ಮತ್ತು ಇಲ್ಲಿಯವರೆಗೆ ಸುಮಾರು 550ಕ್ಕೂ ಹೆಚ್ಚು ಫಲಾನುಭವಿಗಳಿಗೆ ಉಚಿತ ದಂತ ಪಂಕ್ತಿಗಳನ್ನು ವಿತರಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಐ.ಎಮ್ ಆಲಿ, ನಿರ್ದೇಶಕರಾದ ಡಾ.ವಸುಂಧರ ಶಿವಣ್ಣ, ಕೃತಕ ದಂತ ಜೋಡಣಾ ವಿಭಾಗದ ಮುಖ್ಯಸ್ಥ ಡಾ.ವಿನಯ್ ಕುಮಾರ್, ಪ್ರಾಧ್ಯಾಪಕರಾದ ಡಾ.ವೀಣಾ ಪ್ರಕಾಶ್, ಡಾ. ಎಚ್.ಎಸ್. ಶಶಿಧರ, ಡಾ. ಕೆ.ಟಿ. ರೂಪಾ, ಡಾ. ಎಂ.ಎನ್. ಹೊಂಬೇಶ್, ಡಾ. ಭುವನಾ ಸಚಿನ್, ಡಾ. ಬಿ.ಜಿ. ಪ್ರಸನ್ನ, ಡಾ. ಬಿ. ಪ್ರವೀಣ್, ಡಾ. ಮೊಹಮ್ಮದ್ ಸುಭಾನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಾವೇರಿ ಜಿಲ್ಲೆಯ ದಂತ ಭಾಗ್ಯ ನೋಡಲ್ ಅಧಿಕಾರಿ ಡಾ.ಕಲ್ಪನ ಮತ್ತು ಇತರ ದಂತ ವೈದ್ಯರ ತಂಡ ಹಾಜರಿದ್ದರು. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸ್ನಾತಕೋತ್ತರ, ಪದವಿಯೇತರ ವಿದ್ಯಾರ್ಥಿಗಳು ಹಾಗೂ ದಂತ ತಂತ್ರಜ್ಞರು ಸಹಕರಿಸಿದರು.

# ಹೃದಯ ಬೇನೆಗೆ 'ಆರ್ಬಿಟಲ್ ಅಥೆರೆಕ್ಟಮಿ' ಚಿಕಿತ್ಸೆ



ದಾವಣಗೆರೆ,ಜ.16- ಆರ್ಬಿಟಲ್ ಅಥೆರೆಕ್ಟಮಿ ಎಂಬ ಕ್ಲಿಷ್ಟಕರ ಚಿಕಿತ್ಸೆಯನ್ನು ಇಲ್ಲಿನ ಎಸ್. ಎಸ್. ನಾರಾಯಣ ಹೆಲ್ತ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಮಾಡಿದ್ದಾರೆ.

ಆಸ್ಪತ್ರೆಯ ಹಿರಿಯ ಹೃದ್ರೋಗ ತಜ್ಞ ಡಾ. ಆರ್.ಎಸ್. ಧನಂಜಯ ಮತ್ತವರ ತಂಡ ಈ ಚಿಕಿತ್ಸೆ ನೀಡಿದೆ.

ಇಬ್ಬರು ರೋಗಿಗಳ ಪರಿಧಮನಿಯ ಅಪಧಮನಿ ಗಳಲ್ಲಿ (coronary arteries) ಕ್ಯಾಲ್ಸಿಯಂ ಶೇಖರಣೆ ಗೊಂಡು ರಕ್ತ ಪರಿಚಲನೆ ಸುಗಮವಾಗದೇ ಹೃದಯ ಬೇನೆಯಿಂದ ಬಳಲುತ್ತಿದ್ದರು. ಇದನ್ನು ಅತ್ಯಂತ ನವೀನವಾದ ತಂತ್ರಜ್ಞಾನ ಆರ್ಬಿಟಲ್ ಅಥೆರೆಕ್ಟಮಿ ಚಿಕಿತ್ಸೆ ಮೂಲಕ ಪರಿಹರಿಸಿದ್ದಾರೆ.

**ಏನಿದು ಚಿಕಿತ್ಸೆ ?** ಆರ್ಬಿಟಲ್ ಅಥೆರೆಕ್ಟಮಿಯು ಆಂಜಿಯೋ ಪ್ಲಾಸ್ಟಿಗಳಿಗಾಗಿ ಕ್ಯಾಲ್ಸಿಯಂ ಶೇಖರಣೆಗೊಂಡ ಅಪಧಮನಿಗಳನ್ನು ಸ್ವಚ್ಛಗೊಳಿಸಲು ಉಪಯೋಗಿಸುವ ತಂತ್ರಜ್ಞಾನವಾಗಿದೆ. ಇದರಲ್ಲಿ ಉಪಯೋಗಿಸುವ ಸಾಧನ ವಜ್ರದ ತುದಿ ಹೊಂದಿದ್ದು, ಪ್ರತಿ ಸೆಕೆಂಡ್‌ಗೆ 80 ಸಾವಿರದಿಂದ ಲಕ್ಷದ ಇಪ್ಪತ್ತು ಸಾವಿರ ಸಾರಿ ತಿರುಗುವ ಮೂಲಕ, ಅಪಧಮನಿಗಳಲ್ಲಿ ಜಮಾವಣೆಗೊಂಡ ಕ್ಯಾಲ್ಸಿಯಂನ್ನು ತೆಗೆದುಹಾಕುತ್ತದೆ. ಇದರಿಂದ ಸ್ಟೆಂಟ್ ಹಾಕಲು ಇರುವ ಅಡೆತಡೆಗಳು ದೂರವಾಗಿ, ಸ್ಟೆಂಟ್ ಹಾಕಿದ ನಂತರ ಹೃದಯಕ್ಕೆ ರಕ್ತಸಂಚಾರ ಸರಾಗವಾಗಿ ತೊಂದರೆ ದೂರವಾಗುತ್ತದೆ.

ಸುಮಾರು 74 ಮತ್ತು 66 ವರ್ಷದ ಹಿರಿಯರಿಬ್ಬರು ತೀವ್ರದ ಹೃದಯ ಬೇನೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಅವರನ್ನು ತಪಾಸಣೆ ನಡೆಸಿದ ವೈದ್ಯರು ಇವರ ಹೃದಯದ ಪರಿಧಮನಿಯ ಅಪಧಮನಿಗಳಲ್ಲಿ ಕ್ಯಾಲ್ಸಿಯಂ ಶೇಖರಣೆಗೊಂಡು ರಕ್ತ ಸಂಚಾರಕ್ಕೆ ತೊಡಕಾಗಿತ್ತು. ಹಾಗಾಗಿ ಸುಗಮ ರಕ್ತ ಸಂಚಾರಕ್ಕೆ ಕ್ಯಾಲ್ಸಿಯಂ ಶೇಖರಣೆಯಿಂದ ಸ್ಟೆಂಟ್ ಅಳವಡಿಸುವುದು ಕ್ಲಿಷ್ಟಕರವಾಗಿತ್ತು. ಇದನ್ನು ಮನಗಂಡ ವೈದ್ಯರು ಆರ್ಬಿಟಲ್ ಅಥೆರೆಕ್ಟಮಿ ಎಂಬ ವಿನೂತನ ಮತ್ತು ಅತ್ಯಂತ ಸುಧಾರಿತ ತಂತ್ರಜ್ಞಾನದ ಮೂಲಕ ಆರ್ಟರಿಗಳಲ್ಲಿ ಶೇಖರಣೆಗೊಂಡು ಗಟ್ಟಿಯಾಗಿದ್ದ ಕ್ಯಾಲ್ಸಿಯಂ ಅನ್ನು ತೆಗೆದು ಸ್ಟೆಂಟ್ ಅಳವಡಿಸಿ ರೋಗಿಗಳ ಜೀವವನ್ನು ಕಾಪಾಡಿದ್ದಾರೆ.

**ಎಸ್.ಎಸ್ ನಾರಾಯಣ ಆಸ್ಪತ್ರೆ ವೈದ್ಯರ ವಿಶೇಷ ಸಾಧನೆ**

ಈ ನವೀನ ತಂತ್ರಜ್ಞಾನದ ಬಗ್ಗೆ ಮಾತನಾಡಿದ ಡಾ. ಧನಂಜಯ ಆರ್ಬಿಟಲ್ ಅಥೆರೆಕ್ಟಮಿ ಎಂಬ ವಿನೂತನ ಚಿಕಿತ್ಸೆ ನಮ್ಮ ಮಧ್ಯ ಕರ್ನಾಟಕದ ಜನರಿಗೆ ಈಗ ಎಸ್ ಎಸ್ ನಾರಾಯಣ ಹೆಲ್ತ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಲಭ್ಯವಿದೆ. ಇತ್ತೀಚೆಗೆ ನಾವು ಈ ಚಿಕಿತ್ಸೆಯನ್ನು ಇಬ್ಬರು ರೋಗಿಗಳಿಗೆ ನೀಡಿದ್ದೇವೆ, ಚಿಕಿತ್ಸೆ ಬಹಳ ಪರಿಣಾಮಕಾರಿಯಾಗಿದೆ ಎಂದು ತಿಳಿಸಿದರು.

# ಕನ್ನಡ ಕಂಪನ್ನು ಸೂಸುವ ಕನ್ನಡ ಗೀತೆಗಳ 'ನುಡಿ ಹಬ್ಬ' ಕಾರ್ಯಕ್ರಮ



ದಾವಣಗೆರೆ, ಜ.16- ಅದಮ್ಯ ಕಲಾ ಸಂಸ್ಥೆಯು ನಗರದ ರಾಜನಹಳ್ಳಿ ಸೀತಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಅದಮ್ಯ ಆರ್ಟ್ಸ್ ಫೌಂಡೇಷನ್ ಸಹಯೋಗದೊಂದಿಗೆ ಕನ್ನಡ ಗೀತೆಗಳ ನುಡಿ ಹಬ್ಬ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಸಾಹಿತಿ ಹಾಗೂ ಹಿರಿಯ ಪತ್ರಕರ್ತ ಬಾಮ ಬಸವರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಕನ್ನಡ ಭಾಷೆಯ ಹಿರಿಮೆ ಹಾಗೂ ಅದನ್ನು ಉಳಿಸಿ - ಬೆಳೆಸುವ ಬಗ್ಗೆ ಮಾತನಾಡಿದರು.

ವೀಣಾ ವಾದನ ಪೃಥ್ವಿ, ಸುಮಗ ಸಂಗೀತ ಕಾಂತರಾಜು (ಚಾಮರಾಜನಗರ), ಶ್ರೀ ವೀರೇಶ್ವರ ಪುಣ್ಯಾಶ್ರಮದ ಅರುಣ್ ಎಸ್. ತೋರವಳ್ಳಿ ಇವರುಗಳ ಹಾಡುಗಾರಿಗೆ ನೆರೆದವರ ಮನಸೂರೆಗೊಂಡಿತು. ಇವರಿಗೆ ಸದಾಶವ ಹೂಗಾರ್ ಅವರು ತಬಲಾ ಹಾಗೂ ಮಹಾಂತೇಶ್ ಗದಗ ಅವರು ಹಾರ್ಮೋನಿಯಂ ಸಾಥ್ ನೀಡಿದರು.

ಗುರುರಾಜ್ ಪೂಜಾರ್ ನಿರೂಪಿಸಿದರು. ಶ್ರೀಮತಿ ಗೀತಾ ಮಾಲತೇಶ್ ಸ್ವಾಗತಿಸಿದರು. ಅಧ್ಯಕ್ಷತೆಯನ್ನು ಡಾ. ಎ.ಎಂ.ಶಿವಕುಮಾರ್ ವಹಿಸಿದರು. ಮುಖ್ಯ ಅತಿಥಿಗಳಾಗಿ ರೆಡ್ ಕ್ರಾಸ್ ಸಂಸ್ಥೆಯ ಎ.ಜೆ.ರವಿಕುಮಾರ್, ಸೀತಮ್ಮ ಕಾಲೇಜಿನ ಉಪ ಪ್ರಾಚಾರ್ಯ ಇನಾಯತ್ ವುಲ್ಲಾ, ಶ್ರೀ ಮಂಜಪ್ಪ ಸಂಸ್ಥೆಯ ಅನಿತಾ ಬಸವರಾಜ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ವಿಜಯನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾಗಿ ರಾಗಿಮಸಲವಾಡದ ರೇವಣ್ಣ



ಹರಪನಹಳ್ಳಿ, ಜ 16 - ವಿಜಯನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾಗಿ ರಾಗಿಮಸಲವಾಡದ ಕೊಂಡಜ್ಜಿ ರೇವಣಸಿದ್ದಪ್ಪ ಆಯ್ಕೆಯಾಗಿದ್ದಾರೆ. ಉಳಿದಂತೆ ಉಪಾಧ್ಯಕ್ಷರಾಗಿ ಹೊಸಪೇಟೆ ಶ್ರೀನಿವಾಸ, ರಾಜ್ಯ ಪ್ರತಿನಿಧಿಯಾಗಿ ಕಕ್ಕುಪ್ಪಿ ಬಸವರಾಜ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿಜಯನಗರ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್ ತಿಳಿಸಿದ್ದಾರೆ. ಇವೇಳೆ ಕೊಟ್ಟೂರು ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ನಾಗೇಶ್, ಹರಪನಹಳ್ಳಿ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಮಡಿವಾಳಪ್ಪ, ಕೂಡ್ಲಿಗಿ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಸಿದ್ದನಗೌಡ, ಹಡಗಲಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಕೃಷ್ಣಪ್ಪ. ಹಗರಿ ಬೊಮ್ಮನಹಳ್ಳಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ದೇವರಾಜ ಹೊಸಪೇಟೆ, ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಹುಲುಗಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ದೊಡ್ಡರಾಮಣ್ಣ, ಮುಖಂಡರಾದ ನಂದಿಹಳ್ಳಿ ಬಸವರಾಜಪ್ಪ, ನವೀನ್ ಪಾಟೀಲ್, ತೆಲಿಗಿ ಆರ್. ನಾಗರಾಜಪ್ಪ, ತುಂಬಿಗೇರಿ ದ್ಯಾಮನಗೌಡ್ರು, ಬೇವಿನಹಳ್ಳಿ ಕೆಂಚನಗೌಡ್ರು, ರಾಮಘಟ್ಟದ ನಾರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿ ಪ್ರಕಟ**

# ನಗರದ ಮೂವರು ಪತ್ರಕರ್ತರಿಗೆ ಪ್ರಶಸ್ತಿ





ದಾವಣಗೆರೆ, ಜ. 16- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ತನ್ನ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಗೊಳಿಸಿದ್ದು, ದಾವಣಗೆರೆ ಜಿಲ್ಲೆಯ ಮೂವರು ಹಿರಿಯ ಪತ್ರಕರ್ತರಿಗೆ ಪ್ರಶಸ್ತಿ ಲಭಿಸಿದೆ.

ಅತ್ಯುತ್ತಮ ಸೇವಾ ಚಟುವಟಿಕೆಗಳಿಗಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಗಳೂರು ತಾಲ್ಲೂಕು ಘಟಕಕ್ಕೆ ಅತ್ಯುತ್ತಮ ಪ್ರಶಸ್ತಿ ನೀಡಲಾಗಿದೆ.

ದಾವಣಗೆರೆ ಪ್ರಜಾವಾಣಿ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ್ ಅವರಿಗೆ ಅತ್ಯುತ್ತಮ ವಿಡಂಬನಾತ್ಮಕ ಲೇಖನಕ್ಕೆ ನಾಡಿಗೇರ ಕೃಷ್ಣರಾಯರ ಪ್ರಶಸ್ತಿ, ವಿಜಯ ಕರ್ನಾಟಕ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ ಅವರಿಗೆ ಅತ್ಯುತ್ತಮ ಮುಖಪುಟಕ್ಕೆ ಗರುಡನಗಿರಿ ಪ್ರಶಸ್ತಿ, ಪವಿತ್ರ ಪ್ರಜಾ - ಸಹಾಯವಾಣಿ ಸಂಪಾದಕ ಎಸ್.ಕೆ. ಒಡೆಯರ್ ಅವರಿಗೆ ವಿಶೇಷ ಪ್ರಶಸ್ತಿ ದೊರೆತಿದೆ.

ತುಮಕೂರಿನಲ್ಲಿ ನಾಡಿದ್ದು ದಿನಾಂಕ 18 ಮತ್ತು 19ರಂದು ನಡೆಯುವ 39ನೇ ಪತ್ರಕರ್ತರ ರಾಜ್ಯ ಸಮ್ಮೇಳನದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ ತಿಳಿಸಿದ್ದಾರೆ.

**ಅಭಿನಂದನೆ :** ಪ್ರಶಸ್ತಿ ಪುರಸ್ಕೃತರನ್ನು ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್, ರಾಜ್ಯ ಸದಸ್ಯ ಕೆ. ಚಂದ್ರಣ್ಣ ಅಭಿನಂದಿಸಿದ್ದಾರೆ.

# 47ನೇ ಅಂತರರಾಷ್ಟ್ರೀಯ ಉತ್ಸವದಲ್ಲಿ ನಮನ ಅಕಾಡೆಮಿಯಿಂದ ನೃತ್ಯ ಪ್ರದರ್ಶನ



ದಾವಣಗೆರೆ, ಜ. 16- ನಗರದ ನಮನ ಅಕಾಡೆಮಿಯ ವಿದ್ಯಾರ್ಥಿಗಳು ಇದೇ ದಿನಾಂಕ 19ರಂದು ಇಂಡೋನೇಷ್ಯಾದ ಬಾಲಿಯಲ್ಲಿ ನಡೆಯಲಿರುವ 47ನೇ ಅಂತರರಾಷ್ಟ್ರೀಯ ಉತ್ಸವದಲ್ಲಿ ಕನ್ನಡದ ಕಂಪನ್ನು ಪಸರಿಸುವ ನೃತ್ಯ ಪ್ರದರ್ಶಿಸಲಿದ್ದಾರೆ.

ಗುರುಗಳಾದ ವಿದುಷಿ ಶ್ರೀಮತಿ ಮಾಧವಿ ಡಿ.ಕೆ. ಹಾಗೂ ಶಿಷ್ಯಂದಿರಾದ ಬಿ.ಎಸ್. ಯಶಸ್ವಿನಿ, ದೀಕ್ಷ ಯು. ಬೆಳ್ಳೂಡಿ, ಅಮೂಲ್ಯ ಯು. ಬೆಳ್ಳೂಡಿ, ಕೆ.ಎಸ್. ಸಿಂಚನ, ಬಿ.ಎಸ್. ಸಾನ್ವಿ, ಪ್ರಜ್ಞ ಶ್ರೀಮಠ, ಆದ್ಯತಾ ಎಂ. ಕುಲಕರ್ಣಿ, ಎನ್.ಪಿ. ಪ್ರನ್ವಿತ, ಎಂ. ಮಂದಿರ, ಜಿ.ವಿ. ಪ್ರಣತಿ, ಹೆಚ್.ಎಂ. ರಕ್ಷ, ಎಂ. ಪೂರ್ವಿಕ, ವಿ. ಸ್ಫೂರ್ತಿ ಸಾಯಿ, ಜಿ.ಬಿ. ಕಾವ್ಯ ಅವರು ಭಾಗವಹಿಸಲಿದ್ದು, ಈ ಉತ್ಸವದಲ್ಲಿ ಬೇರೆ ಬೇರೆ ದೇಶದ ತಂಡಗಳು ಭಾಗವಹಿಸಲಿವೆ.

ನಮನ ಅಕಾಡೆಮಿಯ ಕಲಾವಿದರ ತಂಡ ಹಾಗೂ ಪೋಷಕರು ನಾಳೆ ದಿನಾಂಕ 17ರಂದು ಬೆಂಗಳೂರಿನಿಂದ ತಮ್ಮ ಪ್ರಯಾಣ ಪ್ರಾರಂಭಿಸಲಿದ್ದಾರೆ.

# ದಾವಣಗೆರೆ ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಆರಾಧ್ಯ ಕೈಗಾರಿಕೆ. ಅತ್ತಿಗೆರೆ ಫೀಡರ್ ವ್ಯಾಪ್ತಿಯ ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ವಿನೋಬನಗರ : ಕಾಮಗಾರಿ ಪೂರ್ಣಕ್ಕೆ ಆಗ್ರಹ



ದಾವಣಗೆರೆ, 16- ಸ್ಥಳೀಯ ವಿನೋಬ ನಗರದ 1ನೇ ಮುಖ್ಯ ರಸ್ತೆಯಲ್ಲಿ ಹೊಸದಾಗಿ ನಿರ್ಮಿಸಿದ ಚರಂಡಿಯ ಮೇಲೆ ಕೂಡಲೇ ಕಲ್ಲು ಹೊದಿಸಬೇಕೆಂದು ಬಿಜೆಪಿ ಕಾನೂನು ಪ್ರಕೋಷ್ಠದ ಸಂಚಾಲಕ ಹೆಚ್. ದಿವಾಕರ್ ಅವರು ನಗರ ಪಾಲಿಕೆಯನ್ನು ಆಗ್ರಹಿಸಿದ್ದಾರೆ.

2024ರ ನ.9ರಂದು ಜನತಾವಾಣಿ ಪತ್ರಿಕೆಯಲ್ಲಿ 'ವಿನೋಬ ನಗರದಲ್ಲಿ ಚರಂಡಿ ಕಾಮಗಾರಿ ಅವೈಜ್ಞಾನಿಕ, ಕಳಪೆ' ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟಣೆ ಆದೊಡನೆ, ಗುತ್ತಿಗೆದಾರ ಚರಂಡಿ ಕಾಮಗಾರಿ ಬೇಗನೆ ಮುಗಿಸಿ, ಅದರ ಮೇಲೆ ಕಲ್ಲು ಹೊದಿಸಲು ಇನ್ನೂ ಮುಂದಾಗಿಲ್ಲ ಎಂದು ತಿಳಿಸಿದ್ದಾರೆ.

ಚರಂಡಿ ಮೇಲೆ ಕಲ್ಲು ಹಾಕದಿರುವುದರಿಂದ ಅದನ್ನು ದಾಟಲು ವೃದ್ಧರು, ಮಕ್ಕಳು ಹಾಗೂ ಮಹಿಳೆಯರು ಹರಸಾಹಸ ಪಡಬೇಕಾಗಿದೆ ಎಂದು ವಿವರಿಸಿದ್ದಾರೆ.

ಕಾಮಗಾರಿ ಬಿಲ್‌ಗೆ ಸಂಬಂಧಿಸಿದಂತೆ ಇಂಜಿನಿಯರ್‌ಗಳು ಅದನ್ನು ಅಳತೆ ಮಾಡಲು ಬರುತ್ತಿದ್ದಾರೆಯೇ ಹೊರತು, ಕಲ್ಲು ಹಾಕಿಸುವ ಕಾರ್ಯ ಮಾಡುತ್ತಿಲ್ಲ ಎಂದು ದೂರಿದ್ದಾರೆ.

ಈ ಕಾಮಗಾರಿ ಪೂರ್ಣವಾಗಿಲ್ಲ. ಇದರ ಗುಣಮಟ್ಟವ ಪರೀಕ್ಷಿಸದೇ ಬಿಲ್ ಪಾವತಿ ಮಾಡಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳೇ ಹೊಣೆಗಾರರು ಆಗುತ್ತಾರೆ. ಈ ಕುರಿತು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಗ್ರಾಮೀಣ ಭಾಗದ ಜನತೆಗೆ ಗ್ರಾಮ ಡಿಜಿ ವಿಕಸನ ಡಿಜಿಟಲ್ ಕಾರ್ಯಕ್ರಮ ವರದಾನ



**ಹರಪನಹಳ್ಳಿ**

ಹರಪನಹಳ್ಳಿ, ಜ. 16 - ಪ್ರಸ್ತುತ 21ನೇ ಶತಮಾನದಲ್ಲಿ ಪ್ರತಿಯೊಬ್ಬರಿಗೂ ಡಿಜಿಟಲ್ ತಂತ್ರಜ್ಞಾನದ ಅರಿವು ಅಗತ್ಯವಾಗಿದೆ ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿಯ ರಾಜೀವ ಗಾಂಧಿ ಸಭಾಂಗಣದಲ್ಲಿ ಗ್ರಾಮ ಡಿಜಿ ವಿಕಸನ ಕಾರ್ಯಕ್ರಮದ ಅಡಿಯಲ್ಲಿ ತಾಲ್ಲೂಕಿನ 3 ಗ್ರಾಮ ಪಂಚಾಯತ್‌ನ ಅರಿವು ಕೇಂದ್ರಗಳಿಗೆ ಕಂಪ್ಯೂಟರ್ ಡೆಸ್ಕ್‌ಟಾಪ್‌ಗಳನ್ನು ವಿತರಿಸಿ ಮಾತನಾಡಿದರು.

ಇಲ್ಲಿಯವರೆಗೆ ಪ್ರಸ್ತುತ 5000 ಅರಿವು ಕೇಂದ್ರಗಳಲ್ಲಿ ಕಾರ್ಯಕ್ರಮ ಅನುಷ್ಠಾನವಾಗಿದ್ದು, ಒಟ್ಟು 2791 ಅರಿವು ಕೇಂದ್ರಗಳಿಗ ಡಿಜಿಟಲ್ ಸಂಪನ್ಮೂಲಗಳಾದ ಡೆಲ್ ಕಂಪ್ಯೂಟರ್, ಆಂಡ್ರಾಯ್ಡ್ ಟಿವಿ, ಸ್ಮಾರ್ಟ್ ಫೋನ್ಸ್, ಕ್ರೋಮ್ ಬುಕ್‌ಗಳನ್ನು ನೀಡಲಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಗ್ರಾಮ ಡಿಜಿ ವಿಕಸನ ಕಾರ್ಯಕ್ರಮ ದಡಿಯಲ್ಲಿ ಒಟ್ಟು 79 ಅರಿವು ಕೇಂದ್ರಗಳಿಗೆ ಡಿಜಿಟಲ್ ಸಂಪನ್ಮೂಲಗಳನ್ನು ವಿತರಿಸಲಾಗಿದೆ ಎಂದರು.

ತಹಶೀಲ್ದಾರ್ ಗಿರೀಶ್ ಬಾಬು, ಕಾರ್ಯ ನಿರ್ವಾಹಕ ಅಧಿಕಾರಿ ವೈ. ಚಂದ್ರಶೇಖರ್, ಶಿಕ್ಷಣ ಫೌಂಡೇಶನ್‌ನ ಜಿಲ್ಲಾ ಸಂಯೋಜಕ ಎಸ್.ಬಿ. ಶ್ರೀಧರ್, ತಾಲ್ಲೂಕು ಸಂಯೋಜಕ ಶಿವರಾಜ್ ತಳವಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# 19 ರಂದು ನಗರದಲ್ಲಿ ವಿವಿಧ ಇಲಾಖೆಗಳಲ್ಲಿನ ಗ್ರೂಪ್ ಬಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ

ದಾವಣಗೆರೆ, ಜ. 16 - ರಾಜ್ಯ ಲೋಕಸೇವಾ ಆಯೋಗದಿಂದ ವಿವಿಧ ಇಲಾಖೆಗಳಲ್ಲಿನ ಗ್ರೂಪ್ ಬಿ ಹುದ್ದೆಗಳ ಆಯ್ಕೆಗೆ ಸ್ಪರ್ಧಾತ್ಮಕ ಪರೀಕ್ಷೆಯು ಇದೇ ದಿನಾಂಕ 19 ಮತ್ತು 25 ರಂದು ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರೀಕ್ಷಾ ಪೂರ್ವ ಸಿದ್ಧತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇದೇ ದಿನಾಂಕ 19 ರಂದು ಬೆಳಗ್ಗೆ 10 ರಿಂದ 11.30 ರವರೆಗೆ ಸಾಮಾನ್ಯ ಪತ್ರಿಕೆ-1ರ ಪರೀಕ್ಷೆ ನಡೆಯಲಿದ್ದು, ದಾವಣಗೆರೆ ನಗರದ 6 ಕೇಂದ್ರಗಳಲ್ಲಿ 3422 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಮತ್ತು ಜ. 25 ರಂದು ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಾಮಾನ್ಯ ಪತ್ರಿಕೆ-2ರ ಪರೀಕ್ಷೆ 6 ಕೇಂದ್ರಗಳಲ್ಲಿ ನಡೆಯಲಿದ್ದು, 2912 ಅಭ್ಯರ್ಥಿಗಳು ಪರೀಕ್ಷೆ ಬರೆಯುವರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ-ನಿರ್ದೇಶಕ ಕರಿಸಿದ್ದಪ್ಪ ಹಾಗೂ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

# ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿ ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ ಧನ್ಯವಾದ



ದಾವಣಗೆರೆ, ಜ. 16- ಜಗಳೂರಿನಲ್ಲಿ ಕಳೆದ ವಾರ ಜರುಗಿದ 14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗಾಗಿ ಶ್ರಮಿಸಿದ ಸರ್ವರಿಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಅಧ್ಯಕ್ಷ ಬಿ.ವಾಮದೇವಪ್ಪ ಧನ್ಯವಾದ ಸಲ್ಲಿಸಿದ್ದಾರೆ. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಶಾಸಕ ಬಿ.ದೇವೇಂದ್ರಪ್ಪ ನೇತೃತ್ವದಲ್ಲಿ ಚಿಂತಕ ಡಾ. ಎ.ಬಿ. ರಾಮಚಂದ್ರಪ್ಪ ಸರ್ವಾಧ್ಯಕ್ಷತೆಯಲ್ಲಿ, ಸ್ವಾಗತ ಸಮಿತಿಯ ಸಂಚಾಲಕ ಎನ್. ಟಿ.ಎರ್ರಿಸ್ವಾಮಿ ಮಾರ್ಗದರ್ಶನದಲ್ಲಿ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು ಎಂದು ಅವರು ತಿಳಿಸಿದ್ದಾರೆ.

# ಹೆಚ್.ತಿಪ್ಪಣ್ಣ ನಿಧನಕ್ಕೆ ಎಸ್ಸೆಸ್ಸೆಂ ಸಂತಾಪ



ದಾವಣಗೆರೆ, ಜ. 16 - ಮಹಾನಗರ ಪಾಲಿಕೆ ಮಾಜಿ ಸದಸ್ಯ ಹಳೇ ಕುಂದುವಾಡದ ಹೆಚ್.ತಿಪ್ಪಣ್ಣ ಅವರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಮಹಾನಗರ ಪಾಲಿಕೆ ಹಾಲಿ, ಮಾಜಿ ಸದಸ್ಯರುಗಳು, ಕಾಂಗ್ರೆಸ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು, ಜಿಲ್ಲಾ ಕುರುಬ ಸಮಾಜದ ಮುಖಂಡರುಗಳು, ಹಳೇ ಕುಂದುವಾಡ ಹಾಗೂ 44ನೇ ವಾರ್ಡ್ ನಾಗರೀಕರು ಸಂತಾಪ ಸೂಚಿಸಿದ್ದಾರೆ.


**AVAILABLE FOR RENT**



Nursing Home, approximately 6000 sqft three storied building Situated in Hasabavi circle, Chamarajpet, Davangere.
available for rent interested Docters may Contact :
Dr. Raju C., 98808 51871
Dr. Ganesh C R., 82174 28193

76ನೇ ಗಣರಾಜ್ಯೋತ್ಸವದ ಪ್ರಯುಕ್ತ
ಓಂ
FREE ಕೀಲು ಮೂಳೆ ಸಲಹಾ ತಪಾಸಣಾ ಶಿಬಿರ
ಮೂಳೆ ಸಾಂದ್ರತಾ ಪರೀಕ್ಷೆ ಶಿಬಿರ (B.M.D. Camp)



ಶೇ. 10% ರಿಯಾಯಿತಿ ಔಷಧಿ, ಎಕ್ಸರೇ ಮತ್ತು ಲ್ಯಾಬ್ ಪರೀಕ್ಷೆಗಳಿಗೆ ಇರುತ್ತದೆ
EESHWA
Dr. DEEPAK KUMAR M M
Consultant Orthopedic Surgeon
MBBS, DNB (Ortho),
MNAMS, Dip. SICOT (Belgium), FIJR, FIASM
ಈಶ್ವ ಆರ್ಥೋಪೆಡಿಕ್ ಮತ್ತು ಟ್ರಾಮಾ ಸೆಂಟರ್
ದಿನಾಂಕ : 19.01.2025, ಭಾನುವಾರ
ಸಮಯ : ಬೆಳಗ್ಗೆ 9.15 ರಿಂದ ಮಧ್ಯಾಹ್ನ : 3.30 ರವರೆಗೆ
ವಿಳಾಸ : # 696, "ಶ್ರೀರಾಮ ನಿವಾಸ", ಶ್ರೀ ಕೃಷ್ಣ ಬೇಕರಿ ಹತ್ತಿರ, 8ನೇ ಮೇನ್, 6ನೇ ಕ್ರಾಸ್, ಚರ್ಚ್ ರೋಡ್, ಸ್ಪಂದನ ಯುರೋಲಾಜಿ ಆಸ್ಪತ್ರೆ ಎದುರು, ಪಿಜೆ ಬಡಾವಣೆ, ದಾವಣಗೆರೆ-2.
"ತಪ್ಪದೇ ಬನ್ನಿ... ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಿ..."
QR Code : Scan for Location
ಹೆಸರು ನೋಂದಾಯಿಸಲು ಸಂಪರ್ಕಿಸಿ :
ಫೋ. : 94813 76363

ಶ್ರೀ ಮಾಚಿದೇವ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ ನಿ.
ನಂ.10. ಪಿ. ಹಾಲೇಶಪ್ಪ ಕಾಂಪ್ಲೆಕ್ಸ್,
ಹಳೇ ಅಂಡರ್ ಬ್ರಿಡ್ಜ್ ಹತ್ತಿರ, ದಾವಣಗೆರೆ-577001
ಈ ಸೊಸೈಟಿಯನ್ನು ಸ್ಥಳಾಂತರಿಸಲಾಗಿದೆ
ಶ್ರೀ ಮಾಚಿದೇವ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.
ಭಗತ್‌ಸಿಂಗ್ ನಗರ, ಕೆ.ಎಸ್.ಆರ್.ಟಿ.ಸಿ ಹಿಂಭಾಗ,
ನಿಟುವಳ್ಳಿ ರಸ್ತೆ, 2ನೇ ಮೇನ್, 13ನೇ ಕ್ರಾಸ್,
ಏಳುಕೋಟಿ ನಿಲಯ, ಎರಡನೇ ಮಹಡಿಗೆ
ಈ ಸೊಸೈಟಿಯನ್ನು ಸ್ಥಳಾಂತರಿಸಲಾಗಿದೆ.
ಪ್ರಿಯ ಗ್ರಾಹಕರೆ ಹಿಂದಿನಂತೆ ಸಹಕರಿಸಬೇಕಾಗಿ ವಿನಂತಿ.
ಅಧ್ಯಕ್ಷರು, ಕಾರ್ಯಕಾರಿ ಮಂಡಳಿ, ಮೊ. : 94486 97728




## ಎಸ್ಸೆಸ್ ಆರೋಗ್ಯ ವಿಚಾರಿಸಿ, ಆಶೀರ್ವದಿಸಿದ ರಂಭಾಪುರಿ, ವಚನಾನಂದ ಸ್ವಾಮೀಜಿ

ದಾವಣಗೆರೆ, ಜ.16- ಶ್ರೀ ರಂಭಾಪುರಿ ಜಗದ್ಗುರು ಡಾ. ವೀರ ಸೋಮೇಶ್ವರ ಸ್ವಾಮೀಜಿ ಅವರು, ಗುರುವಾರ ಬೆಂಗಳೂರು ಸದಾಶಿವನಗರದ ತಮ್ಮ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಶುಭ ಹಾರೈಸಿದರು.

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ವಚನಾನಂದ ಸ್ವಾಮೀಜಿ, ವಾಲ್ಮೀಕಿ ಪ್ರಸನ್ನಾನಂದ ಪುರಿ ಸ್ವಾಮೀಜಿ, ಶ್ರೀ ಮಡಿವಾಳ ಬಸವ ಮಾಚಿದೇವ ಸ್ವಾಮೀಜಿ ಸೇರಿದಂತೆ ಕೆಲವು ಮಠಾಧೀಶರೂ ಸಹ ಶಿವಶಂಕರಪ್ಪನವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

## ದೆಹಲಿ ಗಣರಾಜ್ಯೋತ್ಸವ ಪರೇಡ್‌ಗೆ ಎವಿಕೆ ಕಾಲೇಜು ವಿದ್ಯಾರ್ಥಿನಿ ಆಯ್ಕೆ



ದಾವಣಗೆರೆ, ಜ.16- ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನನ ತೃತೀಯ ಬಿ.ಎ. ವಿದ್ಯಾರ್ಥಿನಿ ಹೆಚ್.ಕೆ. ವೀಣಾ ಅವರು ಇದೇ ದಿನಾಂಕ 26ರಂದು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದಾರೆ.


Aaraike Hospitals
HCG The Specialist in Cancer Care adding life to years
HCG ಕ್ಯಾನ್ಸರ್ ಕೇರ್‌ನಿಂದ ನಮ್ಮ ಅನುಭವಿ ಆಂಕೊಲಾಜಿಸ್ಟ್ ಅನ್ನು ನಿಮ್ಮ ನಗರದಲ್ಲಿ ಭೇಟಿ ಮಾಡಿ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್



ವಿಳಾಸ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
ಕ್ರೀಡಾಂಗಣದ ಎದುರು, ಹವಾಯಿ ರಸ್ತೆ.
ದಾವಣಗೆರೆ - 577001
ಭೇಟಿ ಸಮಯ
DATE : 17 Jan 2025, Friday
TIME : 10:30 AM - 01:00 PM
Dr Krithikaa Sekar
Consultant Radiation Oncologist
HCG Cancer Centre, KR Road
Bangalore, Karnataka
For Appointment, Contact
7829434249
www.hcgoncology.com
AHMEDABAD | BENGALURU | BHAVNAGAR | CHENNAI | CUTTACK | HUBBALLI | INDORE | JAIPUR | KALABURAGI | KENYA | KOLKATA | MUMBAI | MYSORE | NAGPUR | NASHIK | ONGOLE | RAJKOT | RANCHI | SHIMOGA | VADODARA | VIJAYAWADA | VIZAG


## ನಾಟಿ ಆರಂಭ ....



ಚಿತ್ರ : ಜಿಗಳಿ ಪ್ರಕಾಶ್

**ದೇವರಬೆಳಕೆರೆ ಪಿಕಪ್ ಡ್ಯಾಮ್ ವ್ಯಾಪ್ತಿಯಲ್ಲಿ ಮತ್ತು ತುಂಗಭದ್ರಾ ನದಿ ಪಾತ್ರದ ಗದ್ದೆಗಳಲ್ಲಿ ಬೇಸಿಗೆ ಹಂಗಾಮಿನ ಭತ್ತದ ನಾಟಿ ಮಾಡುವ ಕಾರ್ಯ ಭರದಿಂದ ಸಾಗಿದ್ದು, ಗುರುವಾರ ಜರೇಕಟ್ಟೆ ಬಳಿ ಗದ್ದೆಯಲ್ಲಿ ಮಹಿಳೆಯರು ನಾಟಿ ಹಚ್ಚುವ ದೃಶ್ಯ ಕ್ಯಾಮರಾ ಕಣ್ಣಿಗೆ ಸೆರೆಸಿಕ್ಕಿತು. ಭದ್ರಾ ಜಲಾಶಯದ ನೀರನ್ನೇ ಅವಲಂಬಿಸಿರುವ ಅಚ್ಚುಕಟ್ಟಿನ ರೈತರು ಇದೀಗ ಭತ್ತದ ಸಸಿ ಮಡಿ ಚೆಲ್ಲಿದ್ದು, ಇನ್ನೂ 15-20 ದಿನಗಳ ನಂತರ ನಾಟಿ ಆರಂಭಿಸುವ ಸಾಧ್ಯತೆ ಇದೆ.**

## ಹಂಪಿ ದೇವಸ್ಥಾನದ ಆವರಣದಲ್ಲಿ ಬಾಳೆಹಣ್ಣು ನಿಷೇಧ

ಹಂಪಿ, ಜ.16- ಇಲ್ಲಿನ 7ನೇ ಶತಮಾನದ ಶಿವನ ದೇಗುಲದ ಆವರಣದೊಳಗೆ ಬಾಳೆಹಣ್ಣುಗಳನ್ನು ನಿಷೇಧಿಸಿದೆ. ದೇವಸ್ಥಾನ, ಆನೆ ಹಾಗೂ ಭಕ್ತರ ಹಿತದೃಷ್ಟಿಯಿಂದ ಬಾಳೆಹಣ್ಣಿಗೆ ನಿಷೇಧ ಹೇರಲು ನಿರ್ಧರಿಸಲಾಗಿದೆ ಎಂದು ವಿರೂಪಾಕ್ಷ ದೇವಸ್ಥಾನದ ಆಡಳಿತ ಮಂಡಳಿ ಗುರುವಾರ ತಿಳಿಸಿದೆ.

ಭಕ್ತರು ದೇವಾಲಯದ ಆನೆಗೆ ಅತಿಯಾಗಿ ಬಾಳೆ ಹಣ್ಣು ತಿನ್ನಿಸುತ್ತಿದ್ದಾರೆ. ಇದು ಆನೆಗೆ ಹಾನಿಕಾರಕ ಮಾತ್ರವಲ್ಲ, ಇದು ಸ್ಥಳವನ್ನು ತುಂಬಾ ಕೊಳಕು ಮಾಡುತ್ತದೆ. ಭಕ್ತರು ಬಾಳೆಹಣ್ಣಿನ ಸಿಪ್ಪೆಗಳು ಮತ್ತು ಅವರು ಬಾಳೆಹಣ್ಣುಗಳನ್ನು ತಂದ ಪ್ಲಾಸ್ಟಿಕ್ ಚೀಲಗಳನ್ನು ಸಹ ಇಲ್ಲಿಯೇ ಬಿಡುತ್ತಾರೆ' ಎಂದು ದೇವಸ್ಥಾನದ ದತ್ತಿ ಅಧಿಕಾರಿ ಹನುಮಂತಪ್ಪ ಹೇಳಿದ್ದಾರೆ.

ಬಾಳೆಹಣ್ಣನ್ನು ನಿಷೇಧಿಸಿರುವ ಕುರಿತು ವರದಿಗಳು ಹೊರಬಂದಾಗಿನಿಂದ, ಈ ಬಗ್ಗೆ ಕೇಳಲು ಸಾಕಷ್ಟು ಕರೆಗಳು ಬರುತ್ತಿವೆ. ಬಾಳೆಹಣ್ಣು ನಿಷೇಧವನ್ನು ನಿಮ್ಮ ಸಂದರ್ಭಕ್ಕೆ ತಕ್ಕಂತೆ ತೆಗೆದುಕೊಂಡು ವಿವಾದ ಮಾಡಬೇಡಿ ಎಂದು ಹನುಮಂತಪ್ಪ ಮನವಿ ಮಾಡಿದರು. ಇದು ಸ್ಥಳೀಯ ವಿಷಯವಾಗಿದ್ದು, ನಮ್ಮ ದೇವಸ್ಥಾನದ ಆವರಣದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು ನಿರ್ಧಾರ ತೆಗೆದುಕೊಂಡಿದ್ದೇವೆ ಎಂದು ಹನುಮಂತಪ್ಪ ಹೇಳಿದ್ದಾರೆ.

|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ವಾಸಿ **ಐ.ಎಸ್. ಪ್ರಸನ್ನ ಆರಾಧ್ಯ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 13.01.2025ನೇ ಸೋಮವಾರ ಬೆಳಿಗ್ಗೆ 8.30ಕ್ಕೆ
ನನ್ನ ಸಹೋದರನಾದ

**ಡಾ|| ಐ.ಎಸ್. ಪ್ರಶಾಂತ ಆರಾಧ್ಯ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ' ಯನ್ನು**
ದಿನಾಂಕ : 17.01.2025ನೇ ಶುಕ್ರವಾರ ಮಧ್ಯಾಹ್ನ 12.30ಕ್ಕೆ
ತೊಗಟವೀರ ಕಲ್ಯಾಣ ಮಂಟಪ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ ಇಲ್ಲಿ
ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶ್ವೇತಾ ಪ್ರಶಾಂತ್ ಆರಾಧ್ಯ
ಹಾಗೂ ಮಕ್ಕಳು ಮತ್ತು ಕುಟುಂಬ ವರ್ಗದವರು
ಹಾಗೂ ಬಂಧು-ಮಿತ್ರರು

## ದಾವಣಗೆರೆ ಜಿಲ್ಲಾ ಕೃಷಿಕ ಸಮಾಜ, ದಾವಣಗೆರೆ ಜಿಲ್ಲೆ

### ಹೃದಯಪೂರ್ವಕ ಕೃತಜ್ಞತೆಗಳು

ದಿನಾಂಕ : 16.01.2025ನೇ ಗುರುವಾರದಂದು ನಡೆದ
**ದಾವಣಗೆರೆ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆಯಲ್ಲಿ**
ರಾಜ್ಯ ಪ್ರತಿನಿಧಿ, ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ
ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ
ಸರ್ವ ಸದಸ್ಯರುಗಳಿಗೆ, ಅಧಿಕಾರಿ ವರ್ಗದವರಿಗೆ,
ಜಿಲ್ಲೆಯ ಎಲ್ಲಾ ಮಿತ್ರರಿಗೆ
ಹೃದಯಪೂರ್ವಕ ಕೃತಜ್ಞತೆಗಳು.




**ಶಿವಪ್ಪ ಎ.**
ಜಿಲ್ಲಾ ಅಧ್ಯಕ್ಷರು
ಶಾಮನೂರು



**ಎ.ಬಿ ಪಾಟೀಲ್**
ರಾಜ್ಯ ಪ್ರತಿನಿಧಿ
ಬೆಂಕಿಕೆರೆ, ಚನ್ನಗಿರಿ

: ಕಾರ್ಯಕಾರಿ ಸಮಿತಿಯ ಸದಸ್ಯರುಗಳು :



**ಎಂ.ಹೆಚ್. ಕುಮಾರ್** – ಜಿಲ್ಲಾ ಉಪಾಧ್ಯಕ್ಷರು, ಕ್ಯಾತಿನಕೊಪ್ಪ, ನ್ಯಾಮತಿ ತಾಲ್ಲೂಕು



**ಬಿ.ಹೆಚ್.ಉಮೇಶ್ ಬಾಬು** – ಜಿಲ್ಲಾ ಪ್ರಧಾನ ಕಾರ್ಯದರ್ಶಿ, ರಂಗಾಪುರ, ಜಗಳೂರು ತಾಲ್ಲೂಕು




**ಎಸ್.ಹೆಚ್.ಮಂಜುನಾಥ್** – ಜಿಲ್ಲಾ ಖಜಾಂಚಿ, ಹನಗವಾಡಿ, ಹರಿಹರ ತಾಲ್ಲೂಕು




**ಬಿ. ನಾಗರಾಜ್** – ಅಧ್ಯಕ್ಷರು, ಬೇತೂರು, ದಾವಣಗೆರೆ ತಾಲ್ಲೂಕು



**ಎಲ್.ರುದ್ರನಾಯ್ಕ** – ಅಧ್ಯಕ್ಷರು, ಹೊನ್ನಾಳಿ ತಾಲ್ಲೂಕು



**ಎನ್.ಜಿ. ಕುಬೇರಪ್ಪ** – ಜಿಲ್ಲಾ ಪ್ರತಿನಿಧಿ, ನೆಲ್ಲಿಹಂಕಲು, ಚನ್ನಗಿರಿ ತಾಲ್ಲೂಕು



**ನಾಗರತ್ನ ಜೆ.ಬಿ.** – ಜಿಲ್ಲಾ ಪ್ರತಿನಿಧಿ, ಭರಮಸಮುದ್ರ, ಜಗಳೂರು ತಾಲ್ಲೂಕು



**ಜಿ.ಎಸ್ ಬಸವನಗೌಡ** – ಜಿಲ್ಲಾ ಪ್ರತಿನಿಧಿ, ಕುಂದೂರು, ಹೊನ್ನಾಳಿ ತಾಲ್ಲೂಕು



**ಕೆ.ವಿ. ರುದ್ರೇಶ್** – ಜಿಲ್ಲಾ ಪ್ರತಿನಿಧಿ, ಬೆಳ್ಳೂಡಿ, ಹರಿಹರ ತಾಲ್ಲೂಕು



**ಇಂದಿರಾ ಸೋಮಶೇಖರ್** – ಜಿಲ್ಲಾ ಪ್ರತಿನಿಧಿ, ಆರುಂಡಿ, ನ್ಯಾಮತಿ ತಾಲ್ಲೂಕು

## ನೌಕಾದಳಕ್ಕೆ ಕ್ಷಿಪಣಿ ಪೂರೈಸಲು ಭಾರತ್ ಡೈನಾಮಿಕ್ಸ್‌ಗೆ ಗುತ್ತಿಗೆ

ನವದೆಹಲಿ, ಜ.16 - ನೌಕಾದಳಕ್ಕೆ 2960 ಕೋಟಿ ರೂ. ವೆಚ್ಚದಲ್ಲಿ ಕ್ಷಿಪಣಿ ಪೂರೈಸಲು ಸರ್ಕಾರಿ ಸ್ವಾಮ್ಯದ ಭಾರತ್ ಡೈನಾಮಿಕ್ಸ್ ಲಿಮಿ ಟೆಡ್ ಜೊತೆಗೆ ರಕ್ಷಣಾ ಸಚಿವಾಲಯ ಒಪ್ಪಂದ ಮಾಡಿಕೊಂಡಿದೆ. ನೆಲದಿಂದ ಗಗನಕ್ಕೆ ಸಿಡಿಯುವ ಮಧ್ಯಮ ದೂರದ ಕ್ಷಿಪಣಿ ಪೂರೈ ಸಲು ಈ ಒಪ್ಪಂದ ಮಾಡಿಕೊಳ್ಳ ಲಾಗಿದೆ. ಭಾರತದಲ್ಲಿ ರಕ್ಷಣಾ ಉಪಕರಣಗಳ ಉತ್ಪಾದನೆಗೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

## ನಗರದಲ್ಲಿ ಓಶೋ ಧ್ಯಾನ ಶಿಬಿರ

ದಾವಣಗೆರೆ,ಜ.16- ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ವತಿಯಿಂದ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇದೇ ದಿನಾಂಕ 20 ರಿಂದ 26ರವರೆಗೆ ಪ್ರತಿದಿನ ಬೆಳಿಗ್ಗೆ 6ರಿಂದ 7.30 ರವರೆಗೆ ಓಶೋ ಧ್ಯಾನ ಶಿಬಿರ ನಡೆಯಲಿದೆ. ಆಸಕ್ತ ಧ್ಯಾನಾಸಕ್ತರು ಭಾಗವಹಿಸಬಹುದು ಎಂದು ಅರ್ಚನ (97385 72 318) ಪುಷ್ಪ (90367 19573) ತಿಳಿಸಿದ್ದಾರೆ.

## ನಗರದಲ್ಲಿ ಇಂದು 'ಸಿರಿಧಾನ್ಯ' ನಡಿಗೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಸಹಯೋಗದಲ್ಲಿ ಇಂದು ಬೆಳಿಗ್ಗೆ 7.15ಕ್ಕೆ 'ಸಿರಿಧಾನ್ಯ' ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಜಯದೇವ ವೃತ್ತದಿಂದ ಪ್ರಾರಂಭಗೊಂಡು ಹಳೇ ಪಿ.ಬಿ. ರಸ್ತೆ, ಎವಿಕೆ ಕಾಲೇಜು ರಸ್ತೆ, ಹರಳೆಣ್ಣೆ ಕೊಟ್ರಬಸಪ್ಪ ವೃತ್ತದ ಮಾರ್ಗವಾಗಿ ಡಾ. ಎಂ.ಸಿ. ಮೋದಿ ವೃತ್ತದಲ್ಲಿ ಕಾರ್ಯಕ್ರಮ ಮುಕ್ತಾಯವಾಗಲಿದೆ. ಜಿಲ್ಲಾಧಿಕಾರಿ, ಜಿ.ಪಂ. ಸಿಇಓ, ಎಸ್ಪಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಆಸಕ್ತರು ಭಾಗವಹಿಸಲಿದ್ದಾರೆ.

## ಜಿಗಳಿಯಲ್ಲಿ ಇಂದು ಮುತ್ತೈದೆ ಹುಣ್ಣಿಮೆ

ಮಲೇಬೆನ್ನೂರು ಸಮೀಪದ ಜಿಗಳಿಯ ಶ್ರೀ ಚಂದ್ರಗುತ್ಯಮ್ಮ ದೇವಿ ದೇವಸ್ಥಾನದಲ್ಲಿ ಇಂದು ಮುತ್ತೈದೆ ಹುಣ್ಣಿಮೆ ಮಹೋತ್ಸವ ಜರುಗಲಿದೆ.

# ಲೂಯಿಸ್ ಸಿ.ಕೆ. ನಿಧನ



ದಾವಣಗೆರೆ ವಿನೋಬನಗರ 2ನೇ ಮೇನ್ ವಾಸಿ
ಸೆಂಟ್ ಜೊಸೆಫ್ ಟಿಂಬರ್ ಮಾಲೀಕರಾದ

## ಲೂಯಿಸ್ ಸಿ.ಕೆ (ಕಾಕಾ)

ಇವರು ದಿನಾಂಕ 16.1.2025ರ ಗುರುವಾರ ಸಂಜೆ 4.55ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು,
ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು
ದಿನಾಂಕ 17.01.2025ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ರಿಂಗ್ ರಸ್ತೆಯ ಸಂತ ಜೋಸೆಫ್‌ರ
ದೇವಾಲಯದಲ್ಲಿ ಅಂತಿಮ ದಿವ್ಯಬಲಿ ಪೂಜೆ ನಡೆಯುವುದು.
ನಂತರ ನಗರದ ಎಸ್.ಎಸ್. ಆಸ್ಪತ್ರೆ ಹಿಂಭಾಗದ ರಾಮನಗರ ರುದ್ರಭೂಮಿಯಲ್ಲಿ
ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತರು, ಮೊ. : 7829397377**

## ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಹರಿಹರ ತಾ||, ದಾವಣಗೆರೆ ಜಿಲ್ಲೆ (PLD)

### ಪ್ರಕಟಣೆ

ಪ್ರಾಥಮಿಕ ಸಹಕಾರ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಹರಿಹರ ಇದರ ಮುಂದಿನ 05 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಯನ್ನು ದಿನಾಂಕ : 02.02.2025 ರಂದು ಭಾನುವಾರ ಶ್ರೀಶೈಲ ಹೈಟೆಕ್ ಪಿ.ಯು. ಕಾಲೇಜು ಪಿ.ಬಿ. ರಸ್ತೆ, ಹರಿಹರ ಇದರ ಕಟ್ಟಡದಲ್ಲಿ ನಡೆಸಲಾಗುವುದು. ಈ ಸಂಬಂಧ ದಿನಾಂಕ : 17.01.2025 ರಂದು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿದ್ದು, ಅದನ್ನು ಬ್ಯಾಂಕಿನ ಪ್ರತಿಯೊಬ್ಬ ಸಾಲಗಾರರ ಮತ್ತು ಸಾಲಗಾರರಲ್ಲದ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿ, ಬ್ಯಾಂಕಿನ ಕಛೇರಿಯ ನಾಮಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಆದಾಗ್ಯೂ ಅಂಚೆ ತಲುಪದ ಹಾಗೂ ಎಲ್ಲಾ ಅರ್ಹ ಸದಸ್ಯರ ತಿಳುವಳಿಕೆಗಾಗಿ ಈ ಪ್ರಕಟಣೆಯನ್ನು ನೀಡಲಾಗಿರುತ್ತದೆ.

1) ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ : 18.01.2025
2) ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ : 25.01.2025
3) ನಾಮಪತ್ರ ಪರಿಶೀಲನೆ ದಿನಾಂಕ : 26.01.2025
4) ನಾಮಪತ್ರ ಉಮೇದುವಾರಿಕೆ ವಾಪಸ್ ಪಡೆಯಲು ಕೊನೆಯ ದಿನಾಂಕ : 27.01.2025
5) ಅವಶ್ಯವಿದ್ದಲ್ಲಿ ಚುನಾವಣೆ ದಿನಾಂಕ : 02.02.2025.

ವಿಶೇಷ ಸೂಚನೆ : ಚುನಾವಣಾ ವೇಳಾ ಪಟ್ಟಿಯಲ್ಲಿ ಕ್ರ.ಸಂ. 2 ರಲ್ಲಿ ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ : 25.01.2024 ಎಂದು ನಮೂದಾಗಿದ್ದು, ದಿನಾಂಕ : 25.01.2025 ಎಂದು ಓದಿಕೊಳ್ಳತಕ್ಕದ್ದು ಎಂದು ತಿಳಿಸಲಾಗಿದೆ.

ದಿನಾಂಕ : 17.01.2025
ಸ್ಥಳ : ಹರಿಹರ.

ಸಹಿ /- (ಹೆಚ್. ಸುನೀತ)
ರಿಟರ್ನಿಂಗ್ ಅಧಿಕಾರಿ, ಪ್ರಾಥಮಿಕ ಸಹಕಾರ ಕೃಷಿ ಗ್ರಾಮೀಣ
ಅಭಿವೃದ್ಧಿ ಬ್ಯಾಂಕ್ ನಿ., ಹರಿಹರ ಹಾಗೂ ಸಹಕಾರ ಅಭಿವೃದ್ಧಿ
ಅಧಿಕಾರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas